ದಾದಾ ಭಗವಾನರ ನಿರೂಪಣೆ

# ಅಡ್ಜಸ್ಟ್ ಎವ್ರಿವೇರ್



ಪ್ರತಿಯೊಬ್ಬರೊಂದಿಗೆ ಅಡ್ಜಸ್ಟ್‌ಮೆಂಟ್ ಮಾಡಲು ಬಂದರೆ, ಅದುವೇ ಅತಿದೊಡ್ಡ ಧರ್ಮ!

Kannada

ದಾದಾ ಭಗವಾನರ ನಿರೂಪಣೆ

# ಅಡ್ಜಸ್ಟ್ ಎವ್ರಿವೇರ್

ಮೂಲ ಗುಜರಾತಿ ಸಂಕಲನೆ: ಡಾಕ್ಟರ್. ನಿರುಬೇನ್ ಅಮೀನ್
ಕನ್ನಡ ಅನುವಾದ: ಮಹಾತ್ಮ ವೃಂದ

ಪ್ರಕಾಶಕರು: ಶ್ರೀ ಅಜೀತ್ ಸಿ. ಪಟೇಲ್

ದಾದಾ ಭಗವಾನ್ ಆರಾಧನಾ ಟ್ರಸ್ಟ್,

ದಾದಾ ದರ್ಶನ್, 5, ಮಮತಾ ಪಾರ್ಕ್ ಸೊಸೈಟಿ,

ನವ ಗುಜರಾತ್ ಕಾಲೇಜು ಹಿಂಬಾಗ, ಉಸ್ಮಾನಪುರ,

ಅಹ್ಮದಾಬಾದ್- 380014, ಗುಜರಾತ್.

ಫೋನ್: (079) 39830100

**© ಪೂಜ್ಯಶ್ರೀ ದೀಪಕ್‌ಭಾಯಿ ದೇಸಾಯಿ, ತ್ರಿಮಂದಿರ, ಅಡಾಲಜ್ ಜಿಲ್ಲೆ: ಗಾಂಧೀನಗರ ಗುಜರಾತ್.**

ಈ ಪುಸ್ತಕದ ಯಾವುದೇ ಬಿಡಿ ಭಾಗವನ್ನು ಮತ್ತೊಂದೆಡೆ ಉಪಯೋಗಿಸುವುದಾಗಲಿ ಅಥವಾ ಪುನರ್ ಪ್ರಕಟಿಸುವುದಾಗಲಿ ಮಾಡುವ ಮೊದಲು ಕೃತಿಯ ಹಕ್ಕುದಾರರ ಅನುಮತಿಯನ್ನು ಹೊಂದಿರಬೇಕು.

ಪ್ರಥಮ ಆವೃತ್ತಿ: 1000 ಪ್ರತಿಗಳು ನವೆಂಬರ್ 2018

ಭಾವ ಮೌಲ್ಯ: 'ಪರಮ ವಿನಯ ಹಾಗು ನಾನು ಏನನ್ನೂ ತಿಳಿದಿಲ್ಲ' ಎಂಬ ಭಾವನೆ!

ದ್ರವ್ಯ ಮೌಲ್ಯ: 15.00 ರೂಪಾಯಿಗಳು

ಮುದ್ರಣ: ಅಂಬಾ ಆಫ್ ಸೆಟ್

ಬಿ-99, ಎಲೆಕ್ಟ್ರಾನಿಕ್ಸ್ GIDC,

ಕ-6 ರೋಡ್, ಸೆಕ್ಟರ್-25, ಗಾಂಧಿನಗರ-382044

ಫೋನ್: (079) 39830341

# ತ್ರಿಮಂತ್ರ




ನಮೋ ಅರಿಹಂತಾಣಂ

ನಮೋ ಸಿದ್ಧಾಣಂ

ನಮೋ ಆಯರಿಯಾಣಂ



ನಮೋ ಉವಜ್ಝಾಯಾಣಂ

ನಮೋ ಲೋಯೆ ಸವ್ವಸಾಹೂಣಂ



ಏಸೋ ಪಂಚ ನಮುಕ್ಕಾರೋ;

ಸವ್ವ ಪಾವಪ್ಪಣಾಸಣೋ

ಮಂಗಲಾಣಂ ಚ ಸವ್ವೇಸಿಂ;

ಪಢಮಂ ಹವಯಿ ಮಂಗಲಂ

ಓಂ ನಮೋ ಭಗವತೇ ವಾಸುದೇವಾಯ

ಓಂ ನಮಃ ಶಿವಾಯ

ಜೈ ಸಚ್ಚಿದಾನಂದ್



# ‘ದಾದಾ ಭಗವಾನ್’ ಯಾರು?

1958ರ ಜೂನ್ ಮಾಸದ ಒಂದು ಸಂಜೆ, ಸುಮಾರು ಆರು ಗಂಟೆಯಾಗಿರಬಹುದು. ಜನಜಂಗುಳಿಯಿಂದ ತುಂಬಿಹೋಗಿದ್ದ ಸೂರತ್ ಪಟ್ಟಣದ ರೈಲ್ವೇ ನಿಲ್ದಾಣದ ಪ್ಲಾಟ್‌ಫಾರ್ಮ್ ಸಂ. 3ರ ಒಂದು ಬೆಂಚಿನ ಮೇಲೆ ಶ್ರೀ ಎ. ಎಮ್. ಪಟೇಲ್ ಎಂಬ ಹೆಸರಿನ ದೇಹರೂಪಿ ಮಂದಿರದಲ್ಲಿ, ಅಕ್ರಮ ರೂಪದಲ್ಲಿ, ಪ್ರಕೃತಿಯ ಲೀಲೆಯಂತೆ, ‘ದಾದಾ ಭಗವಾನ್’ರವರು ಸಂಪೂರ್ಣವಾಗಿ ಪ್ರಕಟರಾದರು. ಪ್ರಕೃತಿಯು ಅಧ್ಯಾತ್ಮದ ಅದ್ಭುತ ಆಶ್ಚರ್ಯವನ್ನು ಸೃಷ್ಟಿಸಿತು. ಒಂದು ಗಂಟೆಯೊಳಗೆ ಅವರಿಗೆ ವಿಶ್ವದರ್ಶನವಾಯಿತು. ‘ನಾನು ಯಾರು? ದೇವರು ಯಾರು? ಜಗತ್ತನ್ನು ನಡೆಸುವವರು ಯಾರು? ಕರ್ಮ ಎಂದರೆ ಏನು? ಮುಕ್ತಿ ಎಂದರೆ ಏನು?’ ಎಂಬ ಜಗತ್ತಿನ ಎಲ್ಲಾ ಆಧ್ಯಾತ್ಮಿಕ ಪ್ರಶ್ನೆಗಳ ಸಂಪೂರ್ಣ ರಹಸ್ಯ ಪ್ರಕಟಗೊಂಡಿತು. ಈ ರೀತಿ, ಪ್ರಕೃತಿಯು ಜಗತ್ತಿನ ಮುಂದೆ ಒಂದು ಅದ್ವಿತೀಯ ಪೂರ್ಣ ದರ್ಶನವನ್ನು ಪ್ರಸ್ತುತಪಡಿಸಿತು ಹಾಗು ಇದಕ್ಕೊಂದು ಮಾಧ್ಯಮವಾದರು, ಗುಜರಾತಿನ ಚರೋತರ್ ಪ್ರದೇಶದ ಭಾದರಣ್ ಎಂಬ ಹಳ್ಳಿಯ ಪಟೇಲರಾಗಿದ್ದ, ವೃತ್ತಿಯಲ್ಲಿ ಕಾಂಟ್ರಾಕ್ಟರಾಗಿದ್ದ, ಸಂಪೂರ್ಣವಾಗಿ ರಾಗದ್ವೇಷದಿಂದ ಮುಕ್ತರಾಗಿದ್ದವರು ಶ್ರೀ ಎ. ಎಮ್. ಪಟೇಲ್!

‘ವ್ಯಾಪಾರದಲ್ಲಿ ಧರ್ಮವಿರಬೇಕು, ಧರ್ಮದಲ್ಲಿ ವ್ಯಾಪಾರವಲ್ಲ’, ಎಂಬ ಸಿದ್ಧಾಂತದ ಪಾಲನೆ ಮಾಡುತ್ತಾ ಇವರು ಇಡೀ ಜೀವನವನ್ನು ಕಳೆದರು. ಜೀವನದಲ್ಲಿ ಅವರು ಯಾರಿಂದಲೂ ಹಣ ತೆಗೆದುಕೊಳ್ಳಲಿಲ್ಲವಷ್ಟೇ ಅಲ್ಲ, ತಮ್ಮ ಭಕ್ತರಿಗೆ ತಮ್ಮ ಸಂಪಾದನೆಯ ಹಣದಲ್ಲಿ ಯಾತ್ರೆ ಮಾಡಿಸುತ್ತಿದ್ದರು.

ಅವರು ಅನುಭವಿಗಳಾಗಿದ್ದರು. ಅದೇ ರೀತಿ, ಅವರು ಸಿದ್ಧಿಸಿಕೊಂಡ ಅದ್ಭುತವಾದ ಜ್ಞಾನಪ್ರಯೋಗದ ಮೂಲಕ ಕೇವಲ ಎರಡೇ ಗಂಟೆಗಳಲ್ಲಿ ಬೇರೆ ಮುಮುಕ್ಷುಗಳಿಗೂ ಸಹ ಆತ್ಮಜ್ಞಾನದ ಅನುಭವ ಉಂಟಾಗುವಂತೆ ಮಾಡುತ್ತಿದ್ದರು. ಇದನ್ನು ಅಕ್ರಮ ಮಾರ್ಗ ಎಂದು ಕರೆಯಲಾಯಿತು. ಅಕ್ರಮ, ಅದರರ್ಥ ಯಾವುದೇ ಕ್ರಮವಿಲ್ಲದ ಎಂದು. ಹಾಗು ಕ್ರಮ ಎಂದರೆ ಹಂತ ಹಂತವಾಗಿ, ಒಂದರ ನಂತರ ಒಂದರಂತೆ ಕ್ರಮವಾಗಿ ಮೇಲೇರುವುದು ಎಂದು. ಅಕ್ರಮ ಎಂದರೆ ಲಿಫ್ಟ್ ಮಾರ್ಗ, ಒಂದು ಶಾರ್ಟ್ ಕಟ್.

ಅವರು ತಾವೇ ಪ್ರತಿಯೊಬ್ಬರಿಗೂ ‘ದಾದಾ ಭಗವಾನ್ ಯಾರು?’ ಎಂಬುದರ ರಹಸ್ಯದ ಬಗ್ಗೆ ಹೇಳುತ್ತಾ ನುಡಿಯುತ್ತಿದ್ದರು “ನಿಮ್ಮ ಎದುರು ಕಾಣುತ್ತಿರುವವರು 'ದಾದಾ ಭಗವಾನ್' ಅಲ್ಲ. ನಾನು ಜ್ಞಾನಿ ಪುರುಷ. ನನ್ನೊಳಗೆ ಪ್ರಕಟಗೊಂಡಿರುವವರು 'ದಾದಾ ಭಗವಾನ್'. ದಾದಾ ಭಗವಾನ್ ಹದಿನಾಲ್ಕು ಲೋಕಗಳಿಗೂ ಒಡೆಯರು. ಅವರು ನಿಮ್ಮಲ್ಲೂ ಇದ್ದಾರೆ, ಎಲ್ಲರಲ್ಲೂ ಇದ್ದಾರೆ. ನಿಮ್ಮಲ್ಲಿ ಅವ್ಯಕ್ತರೂಪದಲ್ಲಿದ್ದಾರೆ ಮತ್ತು ‘ಇಲ್ಲಿ’ ನನ್ನೊಳಗೆ ಸಂಪೂರ್ಣ ರೂಪದಲ್ಲಿ ಪ್ರಕಟಗೊಂಡಿದ್ದಾರೆ. ದಾದಾ ಭಗವಾನ್‌ರವರಿಗೆ ನಾನೂ ನಮಸ್ಕಾರ ಮಾಡುತ್ತೇನೆ.”

## ದಾದಾ ಭಾಗವಾನ್ ಫೌಂಡೇಶನ್ ನಿಂದ ಪ್ರಕಾಶಿತವಾದ ಕನ್ನಡ ಹಾಗೂ ಹಿಂದಿ ಪುಸ್ತಕಗಳು

### ಕನ್ನಡ ಪುಸ್ತಕಗಳು

1. ಆತ್ಮಸಾಕ್ಷಾತ್ಕಾರ
2. ಅಡ್ಜಸ್ಟ್ ಎವ್ರಿವೇರ್
3. ಸಂಘರ್ಷಣೆಯನ್ನು ತಪ್ಪಿಸಿ

### ಹಿಂದಿ ಪ್ರಸ್ತಕಗಳು

1. ಜ್ಞಾನಿ ಪುರುಷ್ ಕೀ ಪಹಚಾನ್
2. ಸರ್ವ್ ದುಃಖೋಂ ಸೇ ಮುಕ್ತಿ
3. ಕರ್ಮ್ ಕಾ ಸಿದ್ಧಾಂತ್
4. ಆತ್ಮಬೋಧ್
5. ಅಂತಃಕರಣ್ ಕಾ ಸ್ವರೂಪ್
6. ಜಗತ್ ಕರ್ತಾ ಕೌನ್?
7. ಭುಗತೇ ಉಸೀ ಕಾ ಭೂಲ್
8. ಅಡ್ಜಸ್ಟ್ ಎವೆರಿವ್ಹೇರ್
9. ಟಕರಾವ್ ಟಾಲಿಎ
10. ಹುವಾ ಸೋ ನ್ಯಾಯ್
11. ಚಿಂತಾ
12. ಕ್ರೋಧ್
13. ಮೈ ಕೌನ್ ಹೂಂ?
14. ವರ್ತಮಾನ್ ತೀರ್ಥಂಕರ್ ಸೀಮಂಧರ್ ಸ್ವಾಮಿ
15. ಮಾನವ ಧರ್ಮ
16. ಪ್ರೇಮ್
17. ಅಹಿಂಸಾ
18. ಪ್ರತಿಕ್ರಮಣ್ (ಸಂ.)
19. ಪಾಪ್–ಪುಣ್ಯ್
20. ಕರ್ಮ್ ಕಾ ವಿಜ್ಞಾನ್
21. ಚಮತ್ಕಾರ್
22. ವಾಣಿ, ವ್ಯವಹಾರ್ ಮೇ...
23. ಪೈಸೋಂಕಾ ವ್ಯವಹಾರ್
24 .ಪತಿ–ಪತ್ನಿ ಕಾ ದಿವ್ಯ ವ್ಯವ–ಹಾರ್
25. ಮಾತಾ ಪಿತಾ ಔರ್ ಬಚ್ಚೋಂಕಾ...
26. ಸಮಝ್ ಸೇ ಪ್ರಾಪ್ತ್ ಬ್ರಹ್ಮಚರ್ಯ್
27. ನಿಜದೋಷ್ ದರ್ಶನ್ ಸೇ...
28. ಕ್ಲೇಶ್ ರಹಿತ್ ಜೀವನ್
29. ಗುರು–ಶಿಷ್ಯ್
30. ಸೇವಾ–ಪರೋಪಕಾರ್
31. ತ್ರಿಮಂತ್ರ್
32. ಭಾವನಾ ಸೇ ಸುಧರೇ ಜನ್ಮೋಜನ್ಮ್
33. ದಾನ್
34. ಮೃತ್ಯು ಕೆ ರಹಸ್ಯ
35. ದಾದಾ ಭಗವಾನ್ ಕೌನ್?
36. ಸತ್ಯ–ಅಸತ್ಯ ಕೆ ರಹಸ್ಯ
37. ಆಪ್ತವಾಣಿ – 1 ರಿಂದ 9
38. ಆಪ್ತವಾಣಿ – 13 (ಭಾಗ 1 – 2)

ದಾದಾ ಭಗವಾನ್ ಫೌಂಡೇಶನ್‌ನಿಂದ ಗುಜರಾತಿ ಭಾಷೆಯಲ್ಲೂ ಹಲವಾರು ಪುಸ್ತಕಗಳು ಪ್ರಕಾಶಿತವಾಗಿವೆ. www.dadabhagwan.org ನಲ್ಲಿ ಸಹ ನೀವು ಈ ಎಲ್ಲಾ ಪುಸ್ತಕಗಳನ್ನು ಪಡೆಯಬಹುದು.ದಾದಾ ಭಗವಾನ್ ಫೌಂಡೇಶನ್‌ನಿಂದ ಪ್ರತಿ ತಿಂಗಳು ಹಿಂದಿ, ಗುಜರಾತಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ 'ದಾದಾವಾಣಿ' ಮ್ಯಾಗಜಿನ್ ಪ್ರಕಾಶಿತವಾಗುತ್ತದೆ.

# ಸಂಪಾದಕೀಯ

ಜೀವನದ ಪ್ರತಿಯೊಂದು ಪ್ರಸಂಗಗಳಲ್ಲಿಯೂ, ನಾವು ಅರಿತು ಇನ್ನೊಬ್ಬರೊಂದಿಗೆ ಅಡ್ಜಸ್ಟ್ ಆಗದಿದ್ದರೆ ಭಯಾನಕ ಘರ್ಷಣೆಗಳು ಆಗುತ್ತಲೇ ಇರುತ್ತವೆ. ಆಗ, ಜೀವನವು ವಿಷಮಯವಾಗುತ್ತದೆ. ಅಲ್ಲದೆ, ಕೊನೆಗೆ ಜಗತ್ತೇ ಹೊಡೆದು-ಬೈದು ಅಡ್ಜಸ್ಟ್‌ಮೆಂಟ್ ನಮ್ಮಿಂದಲೇ ನಾವು ಮಾಡಿಕೊಳ್ಳುವಂತೆ ಮಾಡುತ್ತದೆ! ಒಪ್ಪಿಯೋ-ಒಪ್ಪದೆಯೋ, ಎಲ್ಲೆಂದರಲ್ಲಿ ನಮ್ಮನ್ನೇ ಮುಂದೆ ಹೋಗಿ ಅಡ್ಜಸ್ಟ್ ಆಗುವಂತೆ ಮಾಡಿಬಿಡುತ್ತದೆ ಹೀಗಿರುವಾಗ, ಇದನ್ನು ಮೊದಲೇ ಅರಿತುಕೊಂಡು, ಯಾಕೆ ಅಡ್ಜಸ್ಟ್ ಆಗಬಾರದು. ಇದರಿಂದಾಗಿ ಎಷ್ಟೋ ಘರ್ಷಣೆಗಗಳಿಂದ ತಪ್ಪಿಸಿಕೊಂಡು, ಸುಖ ಶಾಂತಿಯನ್ನು ಹೊಂದಬಹುದಾಗಿದೆ!

ಜೀವನವು ಬೇರೇನೂ ಅಲ್ಲ, ಕೇವಲ ಅಡ್ಜಸ್ಟ್‌ಮೆಂಟ್. Life is nothing but adjustment. ಜನ್ಮದಿಂದ ಮೃತ್ಯುವಿನವರೆಗೂ ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳುತ್ತಲೇ ಇರಬೇಕಾಗಿದೆ. ಅದು, ಅಳುತ್ತಲಾದರೂ ಆಗಿರಬಹುದು ಇಲ್ಲಾ ನಗುತ್ತಲಾದರೂ ಆಗಿರಬಹುದು! ಓದಲು ಇಷ್ಟವಿರಲಿ, ಇಲ್ಲದಿರಲಿ ಆದರೂ ಅಡ್ಜಸ್ಟ್ ಮಾಡಿಕೊಂಡು ಓದಲೇ ಬೇಕು. ಮದುವೆಯಾದನಂತರ ಸುಖವಿದೆ ಎಂದು ಮದುವೆಯಾಗುವುದು. ಆದರೆ ಮದುವೆಯ ನಂತರ ಇಡೀ ಜೀವನ ಪತಿ-ಪತ್ನಿ ಒಬ್ಬರಿಗೊಬ್ಬರು ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳಲೇ ಬೇಕಾಗುತ್ತದೆ. ಎರಡೂ ವಿಭಿನ್ನ ಪ್ರಕೃತಿಗಳು ಇಡೀ ಜೀವನವನ್ನು ಒಟ್ಟಿಗಿದ್ದು, ಸಂಬಂಧವು ಮುರಿದುಹೋಗದಂತೆ ನಿಭಾಯಿಸಬೇಕಾಗುತ್ತದೆ. ಜೀವನ ಪರ್ಯಂತ ಒಬ್ಬರು ಇನ್ನೊಬ್ಬರೊಂದಿಗೆ ಎಲ್ಲಾ ರೀತಿಯಿಂದ ಅಡ್ಜಸ್ಟ್ ಆಗಬೇಕಾಗುತ್ತದೆ. ಈ ಕಾಲದಲ್ಲಿ ಅಂತಹ ಭಾಗ್ಯಶಾಲಿ ಯಾರಾದರೂ ಇದ್ದಾರೆಯೇ? ಅಯ್ಯೋ, ಅಂತಹ ಶ್ರೀರಾಮ ಹಾಗು ಸೀತೆಗೂ ಕೂಡಾ ಎಷ್ಟೊಂದು ವಿಚಾರಗಳಲ್ಲಿ ಡಿಸ್-ಅಡ್ಜಸ್ಟ್‌ಮೆಂಟ್ ಇರಲಿಲ್ಲವೇ? ಚಿನ್ನದ ಜಿಂಕೆ, ಅಗ್ನಿಪರೀಕ್ಷೆ, ಮತ್ತೆ ಗರ್ಭವತಿಯಾದರೂ ಕೂಡ ಕಾಡಿನಲ್ಲಿ ಅಲಿಯಬೇಕಾಗಿ ಬಂತು! ಇದೆಲ್ಲವನ್ನು ಹೇಗೆ ಅವರುಗಳು ಅಡ್ಜಸ್ಟ್‌ಮೆಂಟ್ ಮಾಡಿಕೊಂಡಿರಬಹುದು?

ಮನೆಯಲ್ಲಿ ಅಮ್ಮ, ಅಪ್ಪ ಮತ್ತು ಮಕ್ಕಳು, ಒಬ್ಬರಿಗೊಬ್ಬರು ಹಾಗೋ ಹೀಗೋ ಮಾಡಿಕೊಂಡು ಯಾಕೆ ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳಬಾರದು? ಯಾರು ಅರಿತು ಅಡ್ಜಸ್ಟ್ ಆಗುತ್ತಾರೋ ಅಲ್ಲಿ ನೆಮ್ಮದಿ ಇರುತ್ತದೆ ಮತ್ತು ಅಲ್ಲಿ ಯಾವ ಕರ್ಮ ಬಂಧನವೂ ಇರುವುದಿಲ್ಲ. ಕುಟುಂಬದ ಜನರೊಂದಿಗೆ, ಸ್ನೇಹಿತರೊಂದಿಗೆ, ವ್ಯವಹಾರದಲ್ಲಿ ಮತ್ತು ಎಲ್ಲೆಡೆಯೂ, ಬಾಸ್ ಜೊತೆಯಲ್ಲೇ ಆಗಲಿ, ವ್ಯಾಪಾರಿಯೇ ಆಗಿರಲಿ, ದಲ್ಲಾಲಿ ಜೊತೆ ಅಥವಾ ಹವಾಮಾನದ ವ್ಯತ್ಯಾಸದೊಂದಿಗೆ ಆಗಲಿ ನಾವು ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳದೆ ಹೋದರೆ, ದುಃಖಗಳ ರಾಶಿಯು ಬೆಟ್ಟದಂತಾಗಿ ಬಿಡುತ್ತದೆ.

ಹೀಗಿರುವಾಗ, ಯಾರು 'ಅಡ್ಜಸ್ಟ್ ಎವ್ರಿವೇರ್' ಎಂಬ ಮಾಸ್ಟರ್ ಕೀ ಅನ್ನು ಇಟ್ಟುಕೊಂಡು ಬದುಕುತ್ತಾರೋ, ಅವರಿಗೆ ಜೀವನದಲ್ಲಿನ ಯಾವ ನಮೂನೆಯ ಬೀಗವಾಗಿದ್ದರೂ ಸರಿ, ತೆರೆಯಲು ಬಾರದಿರಲು ಸಾಧ್ಯವಿಲ್ಲ. ಜ್ಞಾನಿಪುರುಷರಾದ ಪರಮಪೂಜ್ಯ ದಾದಾಶ್ರೀಯವರ ಬಂಗಾರದಂತಹ ಸೂತ್ರ 'ಅಡ್ಜಸ್ಟ್ ಎವ್ರಿವೇರ್'! ಜೀವನದಲ್ಲಿ ಅಡ್ಜಸ್ಟ್ ಮಾಡಿಕೊಂಡು ಬಾಳಿದರೆ ಸಂಸಾರವು ಸುಖಮಯವಾಗುತ್ತದೆ.

-ಡಾ. ನಿರುಬೇನ್ ಅಮೀನ್

# ಅಡ್ಜಸ್ಟ್ ಎವ್ರಿವೇರ್

## ಜೀರ್ಣಿಸಿಕೊಳ್ಳಿ ಈ ಒಂದು ಪದವನ್ನು

**ಪ್ರಶ್ನಕರ್ತ:** ಈಗಿನ ಬದುಕಿನಲ್ಲಿ ಶಾಂತಿಯಿಂದ ಬಾಳಲು ಸರಳ ಮಾರ್ಗ ಬೇಕಾಗಿದೆ.

**ದಾದಾಶ್ರೀ:** ಈ ಒಂದೇ ಒಂದು ಪದವನ್ನು ನಿಮ್ಮ ಜೀವನದಲ್ಲಿ ಅಳವಡಿಸಿ-ಕೊಳ್ಳುತ್ತೀರಾ, ಸರಿಯಾಗಿ ಮತ್ತು ಹೇಗಿದೆಯೋ ಹಾಗೆ Exact?

**ಪ್ರಶ್ನಕರ್ತ:** Exact, ಆಗಲಿ.

**ದಾದಾಶ್ರೀ:** 'ಅಡ್ಜಸ್ಟ್ ಎವ್ರಿವೇರ್' ಈ ಒಂದು ಪದವನ್ನು ನಿಮ್ಮ ಜೀವನದಲ್ಲಿ ಅಳವಡಿಸಿ ಕೊಂಡರೆ, ಬಹಳವಾಯಿತು. ಇದರಿಂದ ನಿಮ್ಮಲ್ಲಿ ನೆಮ್ಮದಿಯು ತನ್ನಷ್ಟಕ್ಕೆಯೇ ಉತ್ಪನ್ನವಾಗುತ್ತದೆ. ಪ್ರಾರಂಭದಲ್ಲಿ ಆರು ತಿಂಗಳವರೆಗೆ ಅಡಚಣೆಗಳು ಕಂಡುಬಂದರೂ, ನಂತರ ತನ್ನಷ್ಟಕ್ಕೆಯೇ ಶಾಂತವಾಗಿ ಬಿಡುತ್ತವೆ. ಮೊದಲ ಆರು ತಿಂಗಳು ಹಿಂದಿನ ಪ್ರತಿಕಾರಗಳು (ರಿಯಾಕ್ಷನ್) ಬರುತ್ತವೆ, ಏಕೆಂದರೆ ನೀವು ತಡವಾಗಿ ಪ್ರಾರಂಭಿಸಿರುವುದರ ಸಲುವಾಗಿ. ಹಾಗಾಗಿ 'ಅಡ್ಜಸ್ಟ್ ಎವ್ರಿವೇರ್'. ಈ ಕಲಿಯುಗದಲ್ಲಿನ ಇಂತಹ ಭಯಂಕರ ಕಾಲದಲ್ಲಂತೂ ಅಡ್ಜಸ್ಟ್ ಮಾಡಿಕೊಳ್ಳದೆ ಹೋದರೆ, ಆಗ ಅಲ್ಲಿಗೆ ಮುಗಿದೇ ಹೋಯಿತು.

ಸಂಸಾರದಲ್ಲಿ ಬೇರೇನ್ನನ್ನೂ ಕಲಿಯದೆ ಇದ್ದರೂ ಪರವಾಗಿಲ್ಲ.ಆದರೆ, 'ಅಡ್ಜಸ್ಟ್' ಆಗುವುದನ್ನು ಕಲಿತಿರಬೇಕು. ಎದುರಿಗಿರುವವರು 'ಡಿಸ್-ಅಡ್ಜಸ್ಟ್' ಆದರೂ, ನಾವು 'ಅಡ್ಜಸ್ಟ್ಮೆಂಟ್' ಮಾಡಿಕೊಂಡರೆ, ಈ ಸಂಸಾರ-ಸಾಗರದಿಂದ ಪಾರಾಗಬಹುದು. ಬೇರೆಯವರಿಗೆ ಅನುಕೂಲವಾಗುವ ಹಾಗೆ ಇರುವುದನ್ನು ಕಲಿತಿದ್ದರೆ, ನಿಮಗೆ ಎಲ್ಲಿಯೂ ದುಃಖವಾಗುವುದಿಲ್ಲ. 'ಅಡ್ಜಸ್ಟ್ ಎವ್ರಿವೇರ್' ಮಾಡಿಕೊಳ್ಳುವವರು ಪ್ರತಿಯೊಬ್ಬರೊಂದಿಗೂ 'ಅಡ್ಜಸ್ಟ್' ಮಾಡಿಕೊಳ್ಳುತ್ತಾರೆ. ಅದೇ ಅತಿದೊಡ್ಡ ಧರ್ಮ. ಈ ಕಾಲದಲ್ಲಂತೂ ವಿವಿಧ ರೀತಿಯ ಪ್ರಕೃತಿಗಳು. ಹಾಗಾಗಿ, 'ಅಡ್ಜಸ್ಟ್' ಆಗದ ಹೊರತು ಬಾಳಲು ಅಸಾಧ್ಯ.

# ಜಗಳ ಬೇಡ, 'ಅಡ್ಜಸ್ಟ್' ಆಗಿಬಿಡಿ

ಸಂಸಾರದ ಅರ್ಥವೇ ಸಮಸರಣ (ಪರಿವರ್ತನೆಯ) ಮಾರ್ಗವಾಗಿದೆ. ಅಂದರೆ, ನಿರಂತರ ಕ್ರಮಬದ್ಧವಾಗಿ ಪರಿವರ್ತನೆಯಾಗುತ್ತಲಿರುವುದು. ಆದರೆ, ಈ ಹಿರಿಯರು ತಮ್ಮ ಹಳೆ ಕಾಲದಲ್ಲೇ ಇದ್ದಾರೆ. ಅಯ್ಯ ಮೂಢಾ! ಕಾಲಕ್ಕೆ

ತಕ್ಕಂತೆ ನಡೆಯಬೇಕು. ಇಲ್ಲವಾದರೆ ಹೊಡೆತವನ್ನು ಹೊಡೆಸಿಕೊಳ್ಳುತ್ತಾ ಜೀವಿಸಬೇಕಾಗುತ್ತದೆ. ಕಾಲಕ್ಕೆ ಸರಿಯಾಗಿ 'ಅಡ್ಜಸ್ಟ್‌ಮೆಂಟ್' ಮಾಡಿಕೊಳ್ಳಬೇಕು. ನಾವಂತೂ ಕಳ್ಳನೊಂದಿಗೆ, ಜೇಬುಕಳ್ಳನೊಂದಿಗೆ ಹಾಗೂ ಎಲ್ಲರೊಂದಿಗೆ 'ಅಡ್ಜಸ್ಟ್‌ಮೆಂಟ್' ಮಾಡಿಕೊಂಡು ಬಿಡುತ್ತೇವೆ. ನಾವು ಆತನೊಂದಿಗೆ ಮಾತನಾಡುವಾಗಲೇ ಆತನಿಗೆ ತಿಳಿಯುತ್ತದೆ ಇವರು ಕರುಣೆಯುಳ್ಳವರು ಎಂದು. ನಾವು ಕಳ್ಳನಿಗೆ 'ನೀನು ಕೆಟ್ಟವ'ನೆಂದು ಹೇಳುವುದಿಲ್ಲ. ಏಕೆಂದರೆ ಅದು, ಅವನ 'ವ್ಯೂಪಾಯಿಂಟ್' (ದೃಷ್ಟಿಕೋನ) ವಾಗಿದೆ. ಅವನ್ನನ್ನು ಜನರು 'ಅಯೋಗ್ಯ'ನೆಂದು ನಿಂದಿಸುತ್ತಾರೆ. ಹಾಗಿದ್ದರೆ, ಈ ವಕೀಲರು, ಅವರು ಸುಳ್ಳು ಹೇಳುವುದಿಲ್ಲವೇ? ಅಯ್ಯೋ! ಅವರು 'ಶುದ್ಧ ಸುಳ್ಳಿನ ಕೇಸನ್ನು ಗೆಲ್ಲಿಸಿಕೊಡುತ್ತೇವೆ' ಎಂದು ಹೇಳುತ್ತಾರೆ. ಇಲ್ಲಿ, ಅವರನ್ನು ಯಾರೂ ಮೋಸಗಾರರೆಂದು ಯಾಕೆ ಹೇಳುವುದಿಲ್ಲ? ಕಳ್ಳನನ್ನು ಕೆಟ್ಟವನೆಂದು ಹೇಳುತ್ತಾರೆ ಹಾಗೂ ಈ ಅಪ್ಪಟ ಸುಳ್ಳಿನ ಕೇಸನ್ನು ಸತ್ಯವೆಂದು ವಾದಿಸುವವರನ್ನು ಹೇಗೆ ಜೀವನದಲ್ಲಿ ವಿಶ್ವಾಸಕ್ಕೆ ತೆಗೆದುಕೊಳ್ಳುವುದು? ಆದರೂ, ಅವರದೇ ನಡೆಯುತ್ತದೆ ಅಲ್ಲವೇ! ಆದುದರಿಂದ ಯಾರನ್ನೂ ನಾವು ಕೆಟ್ಟವರೆಂದು ಹೇಳಬಾರದು. ಅದು ಅವರ 'ವ್ಯೂ ಪಾಯಿಂಟ್' ನಿಂದ ಕರೆಕ್ಟ್ ಆಗಿಯೇ (ಸರಿಯಾಗಿಯೇ) ಇರುತ್ತದೆ. ಆದರೆ, ಅಲ್ಲಿ ಅವನಿಗೆ ಸರಿಯಾದ ತಿಳುವಳಿಕೆ ನೀಡಬೇಕೇನೆಂದರೆ, ಈ ಕಳ್ಳತನ ಮಾಡಿದರೆ, ಅದರ ಪ್ರತಿಫಲದಿಂದ ನಿನಗೇನಾಗುತ್ತದೆ ಎಂದು.

ಮನೆಯಲ್ಲಿ ವಯಸ್ಸಾದವರು ಸುಮ್ಮನೆ ಎಲ್ಲಾ ವಿಷಯಗಳಲ್ಲಿ ಅಡ್ಡ ಮಾತನಾಡುತ್ತಲೇ ಇರುತ್ತಾರೆ, ಈ ಕಬ್ಬಿಣದ ಕಪಾಟು ಯಾಕೆ? ಈ ರೇಡಿಯೋ ಯಾಕೆ? ಅದು ಯಾಕೆ ಹಾಗೆ? ಇದು ಯಾಕೆ ಹೀಗೆ? ಎಂದು. ಮೂಡಾ! ಈಗೀನ ಕಾಲದವರೊಂದಿಗೆ ಸ್ನೇಹವನ್ನು ಬೆಳೆಸಿಕೊಳ್ಳಬೇಕು. ಕಾಲವು ಬದಲಾಗುತ್ತಲೇ ಇರುತ್ತದೆ, ಅದು ಹಾಗಿರದೆ ಹೋದರೆ ಬದುಕುವುದಾದರೂ ಹೇಗೆ? ಏನಾದರು ಹೊಸದಾಗಿ ನೋಡಿದರೆ, ಅಲ್ಲಿ ಮೋಹ ಉಂಟಾಗುತ್ತದೆ. ಹೊಸತನವು ಇಲ್ಲದೆಹೋದರೆ, ಆಗ ಜೀವಿಸುವುದಾದರೂ ಹೇಗೆ? ಇಂಥ ಹೊಸತು ಅದೆಷ್ಟೋ ಬಂದುಹೋಗಿವೆ, ಅದರಲ್ಲಿ ನೀವು ಹಸ್ತಕ್ಷೇಪ ಮಾಡಲು ಹೋಗಬೇಡಿ. ನಿಮಗೆ ಆಗದಿದ್ದರೆ ಆಗ ಅದನ್ನು ನೀವು ಮಾಡಬೇಡಿ. ಆ ಐಸ್-ಕ್ರೀಮ್ ನಿಮಗೆ ಹೇಳುವುದಿಲ್ಲ, ನಮ್ಮಿಂದ ದೂರಹೋಗು ಎಂದು. ನಿಮಗೆ ತಿನ್ನಲು ಬೇಡವಾಗಿದ್ದರೆ ತಿನ್ನಬೇಡಿ. ಇಷ್ಟು ವಯಸ್ಸಾದರೂ ಇನ್ನೂ ಸಿಡುಕುತ್ತೀರಿ.

ಈ ಭಿನ್ನಾಭಿಪ್ರಾಯಗಳೆಲ್ಲವೂ ಕಾಲದ ಬದಲಾವಣೆಯಿಂದಾಗಿದೆ. ಈಗಿನ ಮಕ್ಕಳು ಕಾಲಕ್ಕೆ ತಕ್ಕಂತೆ ಮಾಡುತ್ತಾರೆ. ಈ ಮೋಹವು ಹೊಸ-ಹೊಸದನ್ನು ಹುಟ್ಟುಹಾಕುತ್ತದೆ ಜೊತೆಗೆ ಅದು ಹೊಚ್ಚ ಹೊಸದರಂತೆಯೇ

ತೋರಿಸುತ್ತದೆ. ನಾವು ಚಿಕ್ಕಂದಿನಿಂದಲೂ ಬುದ್ಧಿಯಿಂದ ಬಹಳಷ್ಟು ವಿಚಾರಗಳನ್ನು ಮಾಡಲಾಗುತ್ತಿತ್ತು. ಅದೇನೆಂದರೆ, ಈ ಜಗತ್ತು ತಪ್ಪಾಗಿ ನಡೆಯುತ್ತಿದೆಯೋ ಅಥವಾ ಸರಿಯಾಗಿ ನಡೆಯುತ್ತಿದೆಯೋ ಎಂದು, ಹಾಗೂ ಅಲ್ಲಿ ಅರಿಯಲಾಯಿತೇನೆಂದರೆ, ಈ ಜಗತ್ತನ್ನು ಬದಲಿಸಲು ಯಾರಿಗೂ ಅಧಿಕಾರವೇ ಇಲ್ಲ! ಆದುದರಿಂದ ನಾವು ಹೇಳುವುದು, ಕಾಲಕ್ಕೆ ತಕ್ಕಂತೆ 'ಹೊಂದಿಕೊಂಡು' ಹೋಗಿ. ಮಕ್ಕಳು ಹೊಸ ಟೋಪಿ ಹಾಕಿಕೊಂಡು ನಿಮ್ಮ ಬಳಿ ಬಂದರೆ, ಆಗ ನೀವು, 'ಯಾಕೆ ಇದನ್ನು ಖರೀದಿಸಿದೆ?' ಎಂದು ಪ್ರಶ್ನಿಸುವ ಬದಲು ಅಡ್ಜಸ್ಟ್ ಮಾಡಿಕೊಂಡು, ಅವರೊಂದಿಗೆ ಒಳ್ಳೆಯ ರೀತಿಯಲ್ಲಿ ವ್ಯವಹರಿಸಿ. 'ಎಷ್ಟು ಚೆನ್ನಾಗಿದೆ ನಿನ್ನ ಟೋಪಿ, ಎಲ್ಲಿ ಖರೀದಿಸಿದೆ? ಎಷ್ಟು ಕೊಟ್ಟೆ? ಬಹಳ ಕಡಿಮೆಗೆ ಸಿಕ್ಕಿದೆ?' ಎಂದು ಮಾತನಾಡಿಸುತ್ತಾ 'ಅಡ್ಜಸ್ಟ್' ಆಗಿಬಿಡಬೇಕು.

ಈ ನಮ್ಮ ಧರ್ಮವು ಏನೆಂದು ಹೇಳುತ್ತದೆ, 'ಅನಾನುಕೂಲದಲ್ಲಿ ಅನುಕೂಲತೆಯನ್ನು ನೋಡು'.ಎಂದು. ಒಂದು ದಿನ, ರಾತ್ರಿ ಹಾಸಿಗೆಯ ಬೆಡ್ ಶೀಟ್ ಕೊಳೆಯಾಗಿತ್ತು ಇದರ ಮೇಲೆ ಹೇಗೆ ಮಲಗುವುದು ಎಂದು ನನ್ನ ಮನಸ್ಸಿಗೆ ಬಂತು. ತಕ್ಷಣ ನಾನು ಅಡ್ಜಸ್ಟ್‌ಮೆಂಟ್ ಮಾಡಿಕೊಂಡು, 'ಇಲ್ಲ, ಅಷ್ಟೇನು ಕೊಳೆಯಿಲ್ಲ ಚೆನ್ನಾಗಿಯೇ ಇದೆ' ಎಂದುಕೊಂಡಾಗ, ಎಷ್ಟು ಸಮಾಧಾನದ ಅನುಭವವಾಯಿತೆಂದರೆ ಕೇಳಲೇ ಬೇಡಿ! ಪಂಚೇಂದ್ರಿಯ ಜ್ಞಾನಗಳು ಅನಾನುಕೂಲವನ್ನು ತೋರಿಸುತ್ತದೆ, ಈ ಆತ್ಮದ ಜ್ಞಾನವು ಅನುಕೂಲತೆಯನ್ನು ತೋರಿಸುತ್ತದೆ. ಹಾಗಾಗಿ, ಸದಾ ಆತ್ಮದಲ್ಲಿ ಇದ್ದುಬಿಡಿಬೇಕು.

## ದುರ್ಗಂಧದಲ್ಲೂ 'ಅಡ್ಜಸ್ಟ್‌ಮೆಂಟ್'

ಮುಂಬೈ ನಗರದ ಬಾಂದ್ರದಲ್ಲಿ ಕೊಳಚೆ ನೀರಿನ ಚರಂಡಿಗಳು ದುರ್ವಾಸನೆಯಿಂದ ಕೂಡಿರುತ್ತವೆ. ಆದರೆ ಅಲ್ಲಿ ತುಂಬಾ ವಾಸನೆಯೆಂದು ಅದರೊಂದಿಗೆ ಯಾರಾದರೂ ಜಗಳವಾಡಲು ಹೋಗುತ್ತಾರೆಯೇ? ಹಾಗೆಯೇ ಮನುಷ್ಯರಲ್ಲಿಯೂ ದುರ್ಗಂಧದಿಂದ ಕೂಡಿರುವವರಿರುತ್ತಾರೆ. ಅಂಥವರಿಗೆ ಏನಾದರು ಹೇಳಲಾಗುತ್ತದೆಯೇ? ದುರ್ಗಂಧವಿರುವಲ್ಲಿ ಅದನ್ನು ಕೊಳಚೆ ಪ್ರದೇಶವೆಂದು ಕರೆಯಲಾಗುತ್ತದೆ, ಮತ್ತು ಸುಗಂಧವಿರುವಲ್ಲಿ ಹೂದೋಟವೆಂದು ಕರೆಯಲಾಗುತ್ತದೆ. ಯಾವುದರಲ್ಲೆಲ್ಲಾ ದುರ್ಗಂಧವು ಇರುವುದೋ ಅವೆಲ್ಲವೂ ಹೇಳುವುದೇನೆಂದರೆ, 'ನೀವು ನಮ್ಮೊಂದಿಗೆ ರಾಗ ಅಥವಾ ದ್ವೇಷವನ್ನು ಮಾಡದೆ (ವಿತರಾಗದಿಂದ) ವರ್ತಿಸಿ' ಎಂದು.

ಹೀಗೆ ಎಲ್ಲೆಡೆಯೂ ಒಳ್ಳೆಯದು–ಕೆಟ್ಟದ್ದು, ಎಂದು ಹೇಳುವುದರಿಂದ ಅವು ನಮ್ಮನ್ನು ಗೊಂದಲಕ್ಕೆ ಒಳಪಡಿಸುತ್ತವೆ. ನಾವು ಅವೆರಡನ್ನೂ

ಸರಿಸಮನಾಗಿಸಿ ಬಿಡಬೇಕು. ಅಲ್ಲಿ ಒಂದನ್ನು ಒಳ್ಳೆಯದೆಂದು ಹೇಳಿದ ಕಾರಣದಿಂದಾಗಿ ಮತ್ತೊಂದನ್ನು ಕೆಟ್ಟದ್ದೆಂದು ಪರಿಗಣಿಸಲಾಗುತ್ತದೆ. ಇದು ಗೊಂದಲವನ್ನು ಉಂಟುಮಾಡುತ್ತದೆ. ಬದಲಿಗೆ ಅವೆರಡನ್ನು 'ಮಿಕ್ಚರ್' ಮಾಡಿ (ಸಮನಾಗಿಸಿ) ಬಿಟ್ಟರೆ ಮತ್ತೆ ರಗಳೆಯೇ ಇರುವುದಿಲ್ಲ. 'ಅಡ್ಜಸ್ಟ್ ಎವ್ರಿವೇರ್' ಎಂಬುದನ್ನು ನಾವು ಸಂಶೋಧನೆ ಮಾಡಿದ್ದೇವೆ. ಒಳ್ಳೆಯದನ್ನು ಹೇಳುವವರ ಜೊತೆಯಲ್ಲಾಗಲಿ ಅಥವಾ ಕೆಟ್ಟದನ್ನು ಹೇಳುವವರ ಜೊತೆಯಲ್ಲಾಗಲಿ, ಅವರೊಂದಿಗೆ ಅಡ್ಜಸ್ಟ್ ಆಗಿಬಿಡಬೇಕು. ಯಾರಾದರೂ ನಮಗೆ ಬಂದು 'ನಿಮಗೆ ತಲೆಯಿಲ್ಲ' ಎಂದು ಹೇಳಿದರೆ, ಆಗ ನಾನು ಕೂಡಲೇ ಅಡ್ಜಸ್ಟ್ ಮಾಡಿಕೊಂಡು ಅವರಿಗೆ ಹೇಳುತ್ತೇವೆ, 'ನನ್ನಲ್ಲಿ ಅದಂತೂ (ಬುದ್ಧಿ) ಮೊದಲಿನಿಂದಲೂ ಇಲ್ಲ. ಈಗ ನೀವು ಯಾಕೆ ಹುಡುಕಲು ಹೋಗುತ್ತೀರಾ? ಅದು ಇವತ್ತು ನಿನಗೆ ಗೊತ್ತಾಗಿದೆ, ಆದರೆ ನಾನು ಚಿಕ್ಕಂದಿನಿಂದಲೇ ತಿಳಿದಿದ್ದೇನೆ' ಎಂದು. ಹೀಗೆಂದು ಹೇಳಿ ಬಿಟ್ಟರೆ ಜಂಜಾಟವೇ ಇರುವುದಿಲ್ಲ ಅಲ್ಲವೇ? ಮತ್ತೆ ಅವರು ಎಂದೂ ನಮ್ಮ ಬಳಿ  ಬುದ್ಧಿಯನ್ನು ಹುಡುಕಲು ಬರುವುದಿಲ್ಲ. ಹೀಗೆ ಮಾಡದೆ ಹೋದರೆ 'ನಮ್ಮ ಮನೆಗೆ'  (ಮೋಕ್ಷಕ್ಕೆ) ಹೋಗಿ ಸೇರುವುದು ಯಾವಾಗ?

# ಹೆಂಡತಿಯೊಂದಿಗೆ ಅಡ್ಜಸ್ಟ್ಮೆಂಟ್

**ಪ್ರಶ್ನಕರ್ತ:** ಮನೆಯಲ್ಲಿ ಅಡ್ಜಸ್ಟ್ ಯಾವ ರೀತಿ ಮಾಡಿಕೊಳ್ಳಬೇಕು. ಇದನ್ನು ಸ್ವಲ್ಪ ತಿಳಿಸಿಕೊಡಿ.

**ದಾದಾಶ್ರೀ:** ನೀವು ಏನೋ ಕಾರಣದಿಂದಾಗಿ ಮನೆಗೆ ತಡವಾಗಿ ಹೋಗುತ್ತೀರಿ, ಆಗ ನಿಮ್ಮ ಹೆಂಡತಿ ಸಿಟ್ಟಿನಿಂದ ತಪ್ಪೋ-ಸರಿಯೋ ತಿಳಿಯದೆ ಗಲಾಟೆ ಶುರುಮಾಡುತ್ತಾಳೆ. 'ಏನಿಷ್ಟು ತಡವಾಗಿ ಬರುತ್ತಿದ್ದಿರಾ, ನನಗೆ ಇದು ಇಷ್ಟವಾಗುವುದಿಲ್ಲ' ಎಂದು ಜೋರುಮಾಡುತ್ತಾಳೆ ಅಲ್ಲದೆ ಅವಳ ಸಿಟ್ಟು ನೆತ್ತಿಗೇರಿರುತ್ತದೆ. ಆಗ ನೀವು ಹೇಳಿ, 'ನೋಡು, ನೀನು ವಾಪಾಸು ಹೋಗೆಂದರೆ ಹೋಗಿಬಿಡುತ್ತೇನೆ, ಇಲ್ಲ ಒಳಗೆ ಬಂದು ಕುಳಿತುಕೊಳ್ಳಲು ಹೇಳಿದರೆ ಬಂದು ಕುಳಿತುಕೊಳ್ಳುತ್ತೇನೆ' ಎಂದು. ಆಗ ಅವಳು ಹೇಳುತ್ತಾಳೆ, 'ಬೇಡ, ಮತ್ತೆ ಹೋಗುವುದು ಬೇಡ ಸುಮ್ಮನೆ ಒಳಗೆ ಬಂದು ಮಲಗಿ' ಎಂದು. ನಂತರ ಅವಳನ್ನು ಕೇಳಿ, 'ನೀನು ಊಟ ಮಾಡು ಎಂದರೆ  ಊಟ ಮಾಡುತ್ತೇನೆ ಇಲ್ಲವಾದರೆ ಹಾಗೆ ಮಲಗುತ್ತೇನೆ'. ಆಗ ಅವಳು ಹೇಳುತ್ತಾಳೆ, 'ಬೇಡ, ಊಟ ಮಾಡಿ ಮಲಗಿ' ಎಂದು. ಹೀಗೆ ನೀವು ಅವಳ ಇಚ್ಛಾನುಸಾರ ನಡೆದುಕೊಂಡರೆ, ನಿಮಗೆ ಬೆಳಿಗ್ಗೆ ಒಳ್ಳೆಯ 'ಫಸ್ಟ್ ಕ್ಲಾಸ್' ಟೀ ತಂದುಕೊಡುತ್ತಾಳೆ.ಇಲ್ಲ, ನೀವೇನಾದರು ಅವಳೊಂದಿಗೆ ಸಿಟ್ಟಿನಿಂದ ವ್ಯವಹರಿಸಿದರೆ, ಟೀ ಲೋಟವನ್ನು

ತಂದು ಮೇಜಿನ ಮೇಲೆ ಕುಕ್ಕಿ ಹೋಗುತ್ತಾಳೆ. ಅಲ್ಲದೆ, ಇದು ಹೀಗೆಯೇ ಇನ್ನೂ ಮೂರು ದಿನ ಮುಂದುವರಿಯುತ್ತದೆ.

# ಕಿಚಡಿ ತಿನ್ನುವಿರೋ, ಇಲ್ಲ ಹೋಟೆಲ್ ನಿಂದ ಪಿಜ್ಜಾ, ತರಿಸಿ ತಿನ್ನುವಿರೋ?

ಅಡ್ಜಸ್ಟ್ ಮಾಡಿಕೊಳ್ಳಲು ಬಾರದೆ ಇರುವವರು ಏನು ಮಾಡುತ್ತಾರೆ? ಹೆಂಡತಿಯೊಂದಿಗೆ ಜಗಳವಾಡುತ್ತಾರೆ ಅಲ್ಲವೇ?

**ಪ್ರಶ್ನಕರ್ತ:** ಹೌದು.

**ದಾದಾಶ್ರೀ:** ಹೌದಾ? ಯಾವ ಪಾಲುಗಾರಿಕೆಗಾಗಿ? ಹೆಂಡತಿಯೊಂದಿಗೆ ಏನು ಪಾಲು ಮಾಡಲು ಇದೆ? ಇರುವುದರಲ್ಲಿ ಇಬ್ಬರೂ ಸಹಭಾಗಿಗಳು.

**ಪ್ರಶ್ನಕರ್ತ:** ಗಂಡನಿಗೆ ಗುಲಾಬ್ ಜಾಮೂನ್ ತಿನ್ನಬೇಕಾಗಿದೆ. ಆದರೆ ಹೆಂಡತಿ ಕಿಚಡಿ ಮಾಡಿಬಿಡುತ್ತಾಳೆ. ಆಗ, ಅಲ್ಲಿ ಜಗಳವಾಗುತ್ತದೆ.

**ದಾದಾಶ್ರೀ:** ಅಲ್ಲಿ ಜಗಳವಾಡಿದರೆ ಏನು ಗುಲಾಬ್ ಜಾಮೂನ್ ಬರುತ್ತದೆಯೇ? ಇಲ್ಲ, ಕಿಚಡಿಯನ್ನೇ ತಿನ್ನಬೇಕಾಗಿದೆ.

**ಪ್ರಶ್ನಕರ್ತ:** ಆಮೇಲೆ ಹೊರಗೆ ಹೋಟೆಲ್ ನಿಂದ ಪಿಜ್ಜಾ ತರಿಸಲಾಗುತ್ತದೆ.

**ದಾದಾಶ್ರೀ:** ಹೌದಾ? ಹಾಗಾದರೆ, ನೀವು ಕೇಳಿದ್ದು ಹಾಗೆ ಉಳಿಯಿತು ಮತ್ತು ಅವಳು ಮಾಡಿದ್ದು ಹಾಗೆ ಉಳಿಯಿತು.ಈಗ ಪಿಜ್ಜಾ ಬರುತ್ತದೆ ಅಲ್ಲವೇ? ನೀವು ಮೊದಲು ಕೇಳಿದ್ದೂ ಹೊರಟು ಹೋಯಿತು. ನೀವು ಹೀಗೆ ಮಾಡುವುದಕ್ಕಿಂತ ನಿಮ್ಮ ಹೆಂಡತಿಗೆ ಹೇಳಬಹುದಾಗಿತ್ತು, 'ನಿನಗೆ ಅನುಕೂಲವಾದಾಗ ಮಾಡು' ಎಂದು. ಅವಳಿಗೂ ಒಂದು ದಿನ ತಿನ್ನಬೇಕೆಂದೆನಿಸುತ್ತದೆ ಅಲ್ಲವೇ? ಅವಳು ಸಹ ಮಾಡಿದಾಗ ತಿನ್ನುತ್ತಾಳೆ ಅಲ್ಲವೇ? ಹಾಗಿರುವಾಗ, ನೀವು ಹೇಳಿ 'ನಿನಗೆ ಯಾವಾಗ ಆಗುತ್ತದೆಯೋ ಆ ದಿನ ಮಾಡು' ಎಂದು. ಆಗ ಅವಳು, 'ಇಲ್ಲ, ನೀವು ಯಾವಾಗ ತಿನ್ನಲು ಬಯಸುತ್ತೀರೋ, ಆಗಲೇ ಮಾಡುತ್ತೇನೆ' ಎನ್ನುತ್ತಾಳೆ. ಆಗ, ನೀವು 'ಗುಲಾಬ್ ಜಾಮೂನ್ ಮಾಡು' ಎಂದು ಹೇಳಿಬಿಡಿ. ನೀವು ಮೊದಲೇ ಗುಲಾಬ್ ಜಾಮೂನ್ ಮಾಡೆಂದು ಆಗ್ರಹಿಸಿದರೆ, ಅವಳು ಕಿಚಡಿಯನ್ನೇ ಮಾಡುತ್ತೇನೆಂದು ವಿರುದ್ಧವಾಗಿಯೇ ಹೇಳುತ್ತಾಳೆ.

**ಪ್ರಶ್ನಕರ್ತ:** ಇಂತಹ ಭಿನ್ನಾಭಿಪ್ರಾಯಗಳನ್ನು ತಡೆಯಲು ಯಾವುದಾದರು ದಾರಿ ತೋರಿಸುತ್ತೀರಾ ?

**ದಾದಾಶ್ರೀ:** ನಾನು ತೋರಿಸುವ ದಾರಿಯು ' ಅಡ್ಜಸ್ಟ್ ಎವ್ರಿವೇರ್'. ಅವಳು ಕಿಚಡಿ ಮಾಡುತ್ತೇನೆಂದು ಹೇಳಿದರೆ, ಆಗ ನೀವು ಅಡ್ಜಸ್ಟ್ ಮಾಡಿಕೊಳ್ಳಬೇಕು. ಅಲ್ಲದೆ ನೀವು ಇವತ್ತು ಹೊರಗೆ ಹೋಗುತ್ತೇನೆ, ಸತ್ಸಂಗಕ್ಕೆ ಹೋಗುತ್ತೇನೆ ಎಂದು ಹೇಳಿದಾಗ, ಅವಳು ಅಡ್ಜಸ್ಟ್ ಮಾಡಿಕೊಳ್ಳಬೇಕು. ಯಾರು ಮೊದಲಿಗೆ ಏನು ಹೇಳುತ್ತಾರೋ ಅದಕ್ಕೆ ಮತ್ತೊಬ್ಬರು ಅಡ್ಜಸ್ಟ್ ಆಗಿಬಿಡಬೇಕು.

**ಪ್ರಶ್ನಕರ್ತ:** ನಾನು ಮೊದಲು ಹೇಳಲಾಗಿತ್ತು ಎಂದು, ಅಲ್ಲಿ ಮತ್ತೆ ಜಗಳವಾಗುತ್ತದೆ.

**ದಾದಾಶ್ರೀ:** ಅಲ್ಲಿಯೂ ಕೂಡಾ ಅಡ್ಜಸ್ಟ್ ಆಗಿಬಿಡಿ, ಕಾರಣವೇನೆಂದರೆ ನಿಮ್ಮ ಕೈಯಲ್ಲಿ ಅಧಿಕಾರವಿಲ್ಲ. ಈ ಅಧಿಕಾರ ಯಾರ ಕೈಯಲ್ಲಿದೆ? ಎನ್ನುವುದು ನಮಗೆ ತಿಳಿದಿದೆ. ಆದುದರಿಂದ, ಅಡ್ಜಸ್ಟ್ ಮಾಡಿಕೊಳ್ಳುವುದಕ್ಕೆ ನಿಮಗೆ ತೊಂದರೆ ಏನಾದರೂ ಇದೆಯೇ?

**ಪ್ರಶ್ನಕರ್ತ:** ಇಲ್ಲ, ಸ್ವಲ್ಪವೂ ತೊಂದರೆಯಿಲ್ಲ.

**ದಾದಾಶ್ರೀ:** ನಿನಗೇನಾದರೂ (ಹೆಂಡತಿಗೆ) ತೊಂದರೆಯಾಗುತ್ತದೆಯೇ?

**ಪ್ರಶ್ನಕರ್ತ:** ಇಲ್ಲ.

**ದಾದಾಶ್ರೀ:** ಹಾಗಿದ್ದರೆ ಮತ್ತೇನು, ಕೆಲಸವನ್ನು ಪೂರ್ಣಗೊಳಿಸಿ! 'ಅಡ್ಜಸ್ಟ್ ಎವ್ರಿವೇರ್' ನಿಂದಾಗಿ, ನಿಜವಾಗಿಯು ಏನಾದರು ತೊಂದರೆ ಆಗುತ್ತದೆಯೇ?

**ಪ್ರಶ್ನಕರ್ತ:** ಇಲ್ಲ, ಸ್ವಲ್ಪ ಕೂಡ ತೊಂದರೆಯಿಲ್ಲ.

**ದಾದಾಶ್ರೀ:** ಒಂದು ವೇಳೆ, ಮೊದಲಿಗೆ ಅವನು 'ಇವತ್ತು ಈರುಳ್ಳಿ ಬಜ್ಜಿ, ಲಾಡು ಮತ್ತು ತರಕಾರಿ ಸಾರು ಮಾಡು' ಎಂದು ಹೇಳಿದರೆ, ಆಗ ಅವಳು 'ಅಡ್ಜಸ್ಟ್' ಆಗಿಬಿಡಬೇಕು ಮತ್ತು ಅವಳು 'ಇವತ್ತು ರಾತ್ರಿ ಬೇಗ ಮಲಗಬೇಕು, ಬೇಗ ಬನ್ನಿ' ಎಂದು ಹೇಳಿದರೆ, ಆಗ ಅವನೂ ಕೂಡಾ 'ಅಡ್ಜಸ್ಟ್' ಮಾಡಿಕೊಳ್ಳಬೇಕು. ಎಲ್ಲಿಯಾದರು ಅವನಿಗೆ, ಆ ದಿನ ಸ್ನೇಹಿತರೊಂದಿಗೆ ಹೋಗುವುದಿದ್ದರೆ, ಅದನ್ನು ಮುಗಿಸಿ ರಾತ್ರಿ ಬೇಗನೆ ಮನೆಗೆ ಬಂದುಬಿಡಬೇಕು. ಏಕೆಂದರೆ, ಸ್ನೇಹಿತರೊಂದಿಗೆ ಮನಸ್ತಾಪವಾದರೂ ಪರವಾಗಿಲ್ಲ, ಅದನ್ನು ಮುಂದಿನ ದಿನಗಳಲ್ಲಿ ಸರಿಪಡಿಸಿಕೊಳ್ಳಬಹುದು. ಆದರೆ, ಮೊದಲು ಮನೆಯವರಿಗೆ ತೊಂದರೆಯಾಗದಂತೆ ನೋಡಿ ಕೊಳ್ಳುವುದು ಬಹಳ ಮುಖ್ಯ. ಅಲ್ಲಿ, ಸ್ನೇಹಿತರೊಂದಿಗೆ ಒಳ್ಳೆಯ ರೀತಿಯಲ್ಲಿ ಇರಲು ಹೋಗಿ ಮನೆಯಲ್ಲಿ ಜಗಳವಾಗುವ ರೀತಿಯಲ್ಲಿ ಆಗಬಾರದು. ಆದುದರಿಂದ ಮೊದಲು ಹೆಂಡತಿ ಹೇಳಿದ್ದಕ್ಕೆ ನೀವು 'ಅಡ್ಜಸ್ಟ್' ಮಾಡಿಕೊಳ್ಳಬೇಕು.

**ಪ್ರಶ್ನಕರ್ತ:** ಆದರೆ ಅಲ್ಲಿ, ಅವನಿಗೆ ಎಂಟು ಗಂಟೆಗೆ 'ಮೀಟಿಂಗ್'ಗೆ ಹೋಗಬೇಕಾಗಿದ್ದು, ಅವನ ಹೆಂಡತಿ ಬೇಡ, ಈಗ ಮಲಗಿ ಎಂದು ಹೇಳಿದರೆ, ಆಗ ಅವನು ಏನು ಮಾಡಬೇಕು?

**ದಾದಾಶ್ರೀ:** ಹೀಗೆಲ್ಲಾ ಸುಮ್ಮನೆ ಕಲ್ಪನೆಗಳನ್ನು ಮಾಡಬಾರದು. ಪ್ರಾಕೃತಿಯ ನಿಯಮ ಹೇಗೆಂದರೆ, 'where there is a will, there is a way'. (ಏನು ಇಚ್ಛೆ ಇದೆಯೋ ಅದಕ್ಕೆ ತಕ್ಕ ಹಾದಿ ದೊರಕುತ್ತದೆ.) ಕಲ್ಪನೆ ಮಾಡಿಕೊಂಡರೆ ಆಗ ಕೆಡುತ್ತದೆ. ಅಂತಹ ದಿನ ಬಂದಾಗ, ಅವಳೇ ಅವನಿಗೆ ಬೇಗ ಸಿದ್ಧರಾಗಿ ಎಂದು ಹೇಳಿ, ಗ್ಯಾರೇಜ್ ತನಕ ಬಂದು ಕಳುಹಿಸಿ ಕೊಡುತ್ತಾಳೆ. ವ್ಯರ್ಥವಾಗಿ ಹೀಗೆಲ್ಲಾ ಕಲ್ಪನೆಗಳನ್ನು ಮಾಡಿಕೊಳ್ಳುವುದರಿಂದ ಹಾಳಾಗಿಹೋಗುತ್ತದೆ. ಅದಕ್ಕಾಗಿಯೇ ಪುಸ್ತಕಗಳಲ್ಲಿ ಬರೆದಿದ್ದಾರೆ, 'Where there is a will, there is a way'. ಇದನ್ನು ಅರಿತು ಪಾಲಿಸಿದರೆ ಬಹಳವಾಯಿತು. ನೀವು ಪಾಲಿಸಲು ತಯಾರಿದ್ದೀರಾ?

ಪ್ರಶ್ನಕರ್ತ: ಆಯಿತು ದಾದಾ.

**ದಾದಾಶ್ರೀ:** ಹಾಗೆಂದು ನನಗೆ, 'ಪ್ರಾಮಿಸ್' ಮಾಡುವಿರಾ, ನಿಜವಾಗಿ! ನಿಜವಾಗಲು! ಪ್ರಾಮಿಸ್ ಮಾಡಿದರೆ, ಅವರನ್ನು ಶೂರವೀರನೆಂದು ಕರೆಯಲಾಗುತ್ತದೆ.!!

# ಊಟದಲ್ಲಿ 'ಅಡ್ಜಸ್ಟ್ಮೆಂಟ್'

ವ್ಯವಹಾರದಲ್ಲಿ ಆದರ್ಶವಾಗಿರುವುದರ ಹೆಸರೇ 'ಅಡ್ಜಸ್ಟ್ ಎವ್ರಿವೇರ್' ಆಗಿದೆ! ಇದು, ಪ್ರಗತಿ ಹೊಂದುತ್ತಿರುವ ಜಗತ್ತು. ಅದರಲ್ಲಿ ವ್ಯತ್ಯಾಸವನ್ನು ಹುಡುಕಲು ಹೋಗಬೇಡಿ. ಆದುದರಿಂದಲೇ, ನಾವು ಈಗಿನ ಜನರಿಗಾಗಿ ಈ ಪದವನ್ನು ಬಳಸುತ್ತಿರುವುದು. 'ಅಡ್ಜಸ್ಟ್ ಎವ್ರಿವೇರ್'! ಅಡ್ಜಸ್ಟ್, ಅಡ್ಜಸ್ಟ್, ಅಡ್ಜಸ್ಟ್! ಊಟದಲ್ಲಿ ಸಾರು ಖಾರವಾದರೆ, ಈ ಪದವನ್ನು ನೆನೆಪಿಸಿಕೊಂಡು ದಾದಾ ಹೇಳಿದ್ದಾರೆ ಎಂದು, 'ಅಡ್ಜಸ್ಟ್' ಮಾಡಿಕೊಳ್ಳಿ. ಬೇಡವೆನಿಸಿದರೆ ಸ್ವಲ್ಪವೇ ಸಾರಿನಿಂದ ಊಟಮಾಡಿ ಬಿಡಿ, ಹಾಗೂ ನಿಮಗೆ ಜೊತೆಗೆ ಉಪ್ಪಿನಕಾಯಿ ಬೇಕೆನ್ನಿಸಿದರೆ ಕೇಳಿ. ಆದರೆ ಜಗಳವಾಡಲು ಮುಂದಾಗಬೇಡಿ. ಮನೆಯಲ್ಲಿ ಜಗಳವಾಗ ಬಾರದು. ಯಾವ ಸಂದರ್ಭದಲ್ಲೇ ಆಗಲಿ ನಾವು ತೊಂದರೆಗೆ ಒಳಪಟ್ಟಾಗ, ಅಲ್ಲಿ ನಾವೇ ಅಡ್ಜಸ್ಟ್ಮೆಂಟ್ ಮಾಡಿಕೊಂಡರೆ, ಆಗ ಸಂಸಾರವು ಸುಂದರವಾಗುವುದು.

# ಇಷ್ಟವಾಗದಿದ್ದರೂ ನಿಭಾಯಿಸಿ

ಯಾರಿಗೆ ನಿಮ್ಮೊಂದಿಗೆ ಅಡ್ಜಸ್ಟ್ ಆಗಲು ಕಷ್ಟವಾಗುವುದೋ, ಅವರೊಂದಿಗೆ ನೀವೇ ಅಡ್ಜಸ್ಟ್ ಆಗಿಬಿಡಬೇಕು. ಪ್ರತಿ-ನಿತ್ಯದ ಜೀವನದಲ್ಲಿ ಅತ್ತೆಗೆ ಸೊಸೆಯೊಂದಿಗೆ ಅಥವಾ ಸೊಸೆಗೆ ಅತ್ತೆಯೊಂದಿಗೆ ಅಡ್ಜಸ್ಟ್ ಮಾಡಲು ಸಾಧ್ಯವಾಗದಿದ್ದರೆ, ಆಗ ಅವರಿಬ್ಬರಲ್ಲಿ ಯಾರಿಗೆ ಈ ಪ್ರಾಪಂಚಿಕ ಜೀವನದ ಜಂಜಾಟದಿಂದ ಹೊರಗೆ ಬರಬೇಕೆಂಬ ಇಚ್ಛೆ ಇದೆಯೋ ಅವರು ಅಡ್ಜಸ್ಟ್ ಮಾಡಿಕೊಂಡು ಬಿಡಬೇಕು. ಹಾಗೆಯೇ ಗಂಡ-ಹೆಂಡತಿಯ ನಡುವೆ ಒಬ್ಬರು ಬಿರುಕು ಮೂಡಿಸಿದರೆ ಇನ್ನೊಬ್ಬರು ಅದನ್ನು ಜೋಡಿಸುವ ಕೆಲಸ ಮಾಡಿದರೆ ಮಾತ್ರ ಸಂಬಂಧಗಳನ್ನು ನಿಭಾಯಿಸಬಹುದು ಮತ್ತು ಶಾಂತಿಯುತವಾದ ಜೀವನವನ್ನು ನಡೆಸಬಹುದು. ಅಡ್ಜಸ್ಟ್ಮೆಂಟ್ ಮಾಡಲು ಯಾರಿಗೆ ಬರುವುದಿಲ್ಲವೋ ಅವರನ್ನು ಜನರು ಮೂರ್ಖರೆಂದು ಕರೆಯುತ್ತಾರೆ. ಈ ರಿಲೇಟಿವ್ ಜೀವನದ ಸತ್ಯವನ್ನೇ ಪಟ್ಟುಹಿಡಿದು ಆಗ್ರಹ ಮಾಡುವ ಅಗತ್ಯವೇ ಇಲ್ಲ. ಮನುಷ್ಯರೆಂದು ಯಾರನ್ನು ಕರೆಯುತ್ತಾರೆ? 'ಎವ್ರಿವೇರ್-ಅಡ್ಜಸ್ಟ್ಮೆಂಟ್'! ಯಾರು ಎಲ್ಲರೊಂದಿಗೆ ಹೊಂದಿಕೊಂಡು ಹೋಗುತ್ತಾರೆ, ಅವರನ್ನು ಮನುಷ್ಯರೆಂದು ಕರೆಯುತ್ತಾರೆ. ಕಳ್ಳನೊಂದಿಗೂ ಅಡ್ಜಸ್ಟ್ ಮಾಡಿಕೊಂಡುಬಿಡಬೇಕು.

# ಸುಧಾರಿಸುವುದೋ, ಇಲ್ಲ ಅಡ್ಜಸ್ಟ್ ಮಾಡಿಕೊಳ್ಳುವುದೋ?

ಪ್ರತಿಯೊಂದು ವ್ಯವಹಾರದಲ್ಲೂ ನಮ್ಮ ಎದುರಿನವರೊಂದಿಗೆ ನಾವು 'ಅಡ್ಜಸ್ಟ್' ಆಗಿಬಿಟ್ಟರೆ, ಆಗ ಜೀವನವು ಸರಳವಾಗಿಬಿಡುತ್ತದೆ! ಕೊನೆಯಲ್ಲಿ ಯಾವುದನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗಬೇಕಾಗಿದೆ? ಯಾರೋ ಹೇಳುತ್ತಾರೆ, ನೀನು ಅವಳನ್ನು (ಹೆಂಡತಿಯನ್ನು) ನೆಟ್ಟಗೆ ಮಾಡು ಎಂದು. ಅಯ್ಯೋ, ಅವಳನ್ನು ನೇರ ಮಾಡಲು ಹೋಗಿ ನೀವು ವಕ್ರವಾಗಿ ಬಿಡುವಿರಿ. ಆದುದರಿಂದ, ವಕ್ರವನ್ನು ನೆಟ್ಟಗೆ ಮಾಡಲು ಹೋಗಬೇಡಿ. ಹೇಗಿದೆಯೋ ಹಾಗೆ ಒಪ್ಪಿಕೊಂಡುಬಿಡಿ. ನಮಗೆ ಅವರೊಂದಿಗೆ ಏನಾದರು ಖಾಯಂ ಕೊಟ್ಟು-ತೆಗೆದುಕೊಳ್ಳುವ ವ್ಯಾಪಾರ ಇದ್ದರೆ, ಅದು ಬೇರೆ. ಆದರೆ, ನಾವು ಈ ಜನ್ಮದ ನಂತರ ಎಲ್ಲಿ ಕಳೆದು ಹೋಗುತ್ತೇವೋ! ಇಬ್ಬರ ಮರಣ ಕಾಲ ಬೇರೆ, ಇಬ್ಬರ ಕರ್ಮಗಳು ಬೇರೆ! ಏನೂ ತೆಗೆದುಕೊಂಡು ಹೋಗುವಂತಿಲ್ಲ ಅಥವಾ ಕೊಟ್ಟು ಹೋಗುವಂತಿಲ್ಲ! ಇಲ್ಲಿಂದ ಎಲ್ಲಿಗೆ ಹೋಗುವುದೆಂದು ಯಾರಿಗೆ

ಗೊತ್ತು? ನಾವು ಈಗ ನೆಟ್ಟಗೆ ಮಾಡಿದ್ದು (ಹೆಂಡತಿ) ಮುಂದಿನ ಜನ್ಮದಲ್ಲಿ ಇನ್ನೊಬ್ಬರ ಪಾಲಾಗಲಿದೆ!

ಹೀಗೆಂದಿರುವಾಗ, ನೀವು ಅವರನ್ನು ನೆಟ್ಟಗೆ ಮಾಡಲು ಹೋಗಬೇಡಿ, ಅವರೂ ನಿಮ್ಮನ್ನು ನೆಟ್ಟಗೆ ಮಾಡುವುದು ಬೇಡ. ಏನು ಸಿಕ್ಕಿದೆಯೋ ಅದುವೇ ಬಂಗಾರ! ಈ ಪ್ರಕೃತಿಯನ್ನು ಯಾರೂ ಎಂದೂ ಸರಿಪಡಿಸಲಾಗುವುದಿಲ್ಲ. ನಾಯಿಯ ಬಾಲ ಎಂದಿಗೂ ಡೊಂಕೆ. ಹಾಗಾಗಿ ನಾವು ಎಚ್ಚರಿಕೆಯಿಂದ ವರ್ತಿಸಬೇಕು, ಹೇಗಿದೆಯೊ ಹಾಗೆಯೇ ಸರಿ, 'ಅಡ್ಜಸ್ಟ್ -ಎವ್ರಿವೇರ್ '.

# ಪತ್ನಿಯು 'ಕೌಂಟರ್ ವೆಯಿಟ್', ಇದ್ದ ಹಾಗೆ

**ಪ್ರಶ್ನಕರ್ತ:** ನಾನು, ನನ್ನ ಹೆಂಡತಿಯೊಂದಿಗೆ ಅಡ್ಜಸ್ಟ್ ಆಗಲು ಬಹಳಷ್ಟು ಪ್ರಯತ್ನಿಸುತ್ತೇನೆ. ಆದರೆ ಆಗುವುದಿಲ್ಲ.

**ದಾದಾಶ್ರೀ:** ಇವೆಲ್ಲವೂ ಲೆಕ್ಕಾಚಾರವೇ ಆಗಿದೆ. ತಪ್ಪು ಬೀಗ ಮತ್ತು ತಪ್ಪು ಕೀಲಿಕೈ. ಆ ತಪ್ಪು ಕೀಲಿಕೈನಿಂದ ಎಷ್ಟೇ ಪ್ರಯತ್ನಿಸಿದರೂ ಹೇಗೆ ತೆರೆಯಲು ಸಾಧ್ಯವಾಗುತ್ತದೆ? ನಿಮಗೆ ಏನು ಅನ್ನಿಸುತ್ತದೆ, 'ಈ ಸ್ತ್ರೀಯರು ಯಾಕೆ ಹೀಗೆ?' ಎಂದು. ಆದರೆ, ನಿಮ್ಮ ಹೆಂಡತಿ ನಿಮಗೆ ಕೌಂಟರ್-ವೆಯಿಟ್ ಹಾಗೆ. ಎಷ್ಟು ನಿಮ್ಮಲ್ಲಿ ವಕ್ರತೆ ಇದೆಯೋ ಅದಕ್ಕೆ ಸರಿಯಾಗಿ ಅವಳದ್ದು ವಿಭಿನ್ನ ವರ್ತನೆ. ಆದುದರಿಂದಲೇ, ಈ ಎಲ್ಲಾವನ್ನು ನಾವು ವ್ಯವಸ್ಥಿತ್ (ವ್ಯವಸ್ಥೆ) ಎಂದು ಹೇಳುತ್ತಿರುವುದು!

**ಪ್ರಶ್ನಕರ್ತ:** ಎಲ್ಲರೂ ನಮ್ಮನ್ನೇ ನೆಟ್ಟಗೆ ಮಾಡಲು ಬಂದಿರುವ ಹಾಗೆ ಅನ್ನಿಸುತ್ತದೆ.

**ದಾದಾಶ್ರೀ:** ಅವರು ನಿಮ್ಮನ್ನು ನೆಟ್ಟಗೆ ಮಾಡಲೇ ಬೇಕು. ಇಲ್ಲವಾದರೆ ಸಂಸಾರವು ನಡೆಯುವುದಿಲ್ಲ! ನೆಟ್ಟಗಾಗದಿದ್ದರೆ ಮತ್ತೆ ತಂದೆಯೆಂದು ಹೇಗೆ ಕರೆಸಿಕೊಳ್ಳುವುದು? ನೆಟ್ಟಗಾದರೆ ಮಾತ್ರ ತಂದೆಯೆಂದು ಹೇಳಿಸಿಕೊಳ್ಳುವಿರಿ. ಸ್ತ್ರೀ ಪ್ರಕೃತಿ ಹೇಗೆಂದರೆ ಅವರು ಎಂದೂ ಬದಲಾಗುವುದಿಲ್ಲ, ಆದುದರಿಂದ ನಾವೇ ಬದಲಾಗಬೇಕು. ಆ ಸ್ವಭಾವವೇ ಹಾಗೆ, ಅದು ಬದಲಾಗುವುದಿಲ್ಲ. ವೈಫ್ ಅಂದರೆ ಯಾರು?

**ಪ್ರಶ್ನಕರ್ತ:** ನೀವೇ ಹೇಳಿ.

**ದಾದಾಶ್ರೀ:** 'ವೈಫ್ ಇಸ್ ದಿ ಕೌಂಟರ್-ವೆಯಿಟ್ ಒಫ್ ಮ್ಯಾನ್ (ಹಸ್ಬೆಂಡ್)'. ಈ ಕೌಂಟರ್-ವೆಯಿಟ್ ಇಲ್ಲವಾದರೆ ಮನುಷ್ಯನು (ಪುರುಷನು) ಮುಗ್ಗರಿಸಿ ಬೀಳುತ್ತಾನೆ.

**ಪ್ರಶ್ನಕರ್ತ:** ಇದು ಅರ್ಥವಾಗುತ್ತಿಲ್ಲ.

**ದಾದಾಶ್ರೀ:** ಈ 'ಎಂಜಿನ್'ಗಳಲ್ಲಿ ಕೌಂಟರ್-ವೆಯಿಟ್ ಇಡುತ್ತಾರೆ. ಅದು ಇಲ್ಲವಾದರೆ 'ಎಂಜಿನ್' ಓಡುತ್ತಾ ಓಡುತ್ತಾ ಮುಗ್ಗರಿಸಿಬಿಡುತ್ತದೆ. ಹಾಗೆಯೇ ಇಲ್ಲಿ ಪುರುಷನಿಗೆ ಕೌಂಟರ್-ವೆಯಿಟ್ ಆಗಿ ಸ್ತ್ರೀ ಇರುತ್ತಾಳೆ. ಸ್ತ್ರೀ ಇದ್ದರೆ ಮುಗ್ಗರಿಸುವುದಿಲ್ಲ. ಹಾಗಿಲ್ಲವಾದರೆ, ಹೇಗೆಂದರೆ ಹಾಗೆ ಯಾವ ಕಡೆಗೆ ಹೋಗುತ್ತಾರೆಂಬುದು ತಿಳಿಯುವುದಿಲ್ಲ. ಇವತ್ತು ಇಲ್ಲಿರುತ್ತಾರೆ ನಾಳೆ ಅಲ್ಲಿಂದ ಇನ್ನೆಲ್ಲಿಗೆ ಹೋಗುತ್ತಾರೋ! ಹೆಂಡತಿ ಇದ್ದಾಳೆಂದು ಮನೆಗೆ ಬರುತ್ತಾರೆ. ಇಲ್ಲವಾದರೆ ಮನೆಗೆ ಎಲ್ಲಿ ಬರುತ್ತಾರೆ?

**ಪ್ರಶ್ನಕರ್ತ:** ಇಲ್ಲ ಮನೆಗೆ ಬರುವುದಿಲ್ಲ.

**ದಾದಾಶ್ರೀ:** ಹೆಂಡತಿ, ಗಂಡನಿಗೆ ಕೌಂಟರ್-ವೆಯಿಟ್ ಆಗಿರುತ್ತಾಳೆ.

# ಘರ್ಷಣೆಗಳು, ಅಂತಿಮವಾಗಿ ಕೊನೆಗೊಳ್ಳುತ್ತವೆ

**ಪ್ರಶ್ನಕರ್ತ:** ಮಧ್ಯಾಹ್ನದ ಹೊತ್ತಿಗೆ, ಆ ದಿನ ಬೆಳಿಗ್ಗೆ ನಡೆದ ಜಗಳವು ಮರೆತು ಹೋಗುತ್ತದೆ ಮತ್ತು ಸಂಜೆಗೆ ಇನ್ನೊಂದು ಹೊಸತು ಶುರುವಾಗುತ್ತದೆ.

**ದಾದಾಶ್ರೀ:** ಇದನ್ನು ನಾವೆನೆಂದು ತಿಳಿಯಬೇಕೇನೆಂದರೆ, ಈ ಜಗಳಗಳು ಯಾವುದೋ ಶಕ್ತಿಯ ಪ್ರಭಾವದಿಂದಾಗುತ್ತಿವೆ. ಒರಟಾಗಿ ಮಾತನಾಡುವಲ್ಲಿ ಕೂಡ ಯಾವುದೋ ಶಕ್ತಿಯು ಕೆಲಸ ಮಾಡುತ್ತಿದೆ. ಜನರು ಮೊದಲು ಹೇಳುವುದನ್ನು ಹೇಳಿಬಿಡುತ್ತಾರೆ ನಂತರ ಅಡ್ಜಸ್ಟ್ ಮಾಡಿಕೊಳ್ಳುತ್ತಾರೆ, ಎಲ್ಲೆಡೆಯೂ ಹೀಗಿಯೇ. ಆದರೆ ಇದನ್ನೆಲ್ಲಾ ಜ್ಞಾನದಿಂದ ತಿಳಿಯಬಹುದಾಗಿದೆ. ಆದುದರಿಂದ ಜಗತ್ತಿನಲ್ಲಿ ಅಡ್ಜಸ್ಟ್ ಆಗಬೇಕು. ಯಾಕೆಂದರೆ ಪ್ರತಿಯೊಂದು ವಸ್ತುವೂ ಅಂತ್ಯಗೊಳ್ಳುವುದೇ ಆಗಿದೆ. ಅದು ಕೆಲವೊಮ್ಮೆ ಹೆಚ್ಚು ಸಮಯ ತೆಗೆದುಕೊಂಡಾಗ ನೀವು ಅವರಿಗೆ 'ಹೆಲ್ಪ್' (ಹೊಂದಾಣಿಕೆ) ಮಾಡದೆಹೋದರೆ, ಇನ್ನು ಹೆಚ್ಚಿನ ಹಾನಿ ಉಂಟಾಗುತ್ತದೆ. ಸ್ವತಃ ನಿಮಗೂ ಹಾನಿ ಉಂಟಾಗುತ್ತದೆ ಹಾಗು ಎದುರಿನವರಿಗೂ ಹಾನಿ ಉಂಟುಮಾಡುತ್ತದೆ.

# ಆಗದಿದ್ದರೆ, ಪ್ರಾರ್ಥನೆಯಿಂದ ಅಡ್ಜಸ್ಟ್‌ಮೆಂಟ್

**ಪ್ರಶ್ನಕರ್ತ:** ಎದುರಿಗಿರುವ ವ್ಯಕ್ತಿಗೆ ತಿಳಿವಳಿಕೆ ಕೊಡುವುದರಲ್ಲಿ, ನನ್ನ ಪ್ರಯತ್ನವನ್ನು ನಾನು ಮಾಡುತ್ತೇನೆ. ಆದರೆ, ಅದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕಾಗಿರುವುದು ಅವರಿಗೆ ಬಿಟ್ಟಿದಲ್ಲವೇ?

**ದಾದಾಶ್ರೀ:** ಅವರಿಗೆ ತಿಳಿಸಿಕೊಡುವುದು ನಿಮ್ಮ ಜವಾಬ್ದಾರಿ. ಆದರೆ ಅವರಿಗೆ ಅರ್ಥವಾಗದಿದ್ದರೆ, ಆಗ ಬೇರೇನೂ ಉಪಾಯವಿಲ್ಲ. ಅಂತಿಮವಾಗಿ ನೀವು ಮಾಡಬೇಕಾಗಿರುವುದು ಒಂದೇ, ಅದು 'ಹೇ ದಾದಾ ಭಗವಾನ್! ಅವರಿಗೆ ಸದ್ಬುದ್ಧಿಕೊಡಿ' ಎಂಬ ಪ್ರಾರ್ಥನೆ. ನಿಮ್ಮಿಂದ ಆಗುವುದಿಲ್ಲವೆಂದು ಸುಮ್ಮನೆ ಬಿಟ್ಟು ಬಿಡುವುದಲ್ಲ. ಪ್ರಾರ್ಥನೆಯಿಂದ ಸಾಧ್ಯ, ಇದು ಸುಳ್ಳಲ್ಲ. ಇದು ದಾದಾರವರ 'ಅಡ್ಜಸ್ಟ್‌ಮೆಂಟ್' ನ ವಿಜ್ಞಾನವಾಗಿದೆ, ಈ 'ಅಡ್ಜಸ್ಟ್‌ಮೆಂಟ್' ಬಹಳ ಅದ್ಭುತವಾದದ್ದಾಗಿದೆ! ಹಾಗು ಎಲ್ಲಿ ಅಡ್ಜಸ್ಟ್ ಆಗುವುದಿಲ್ಲವೋ ಅಲ್ಲಿ ಅದರ ಅನುಭವವು ನಿಮಗೆ ಅರಿವಾಗಿರಬೇಕಲ್ಲವೆ? ಈ 'ಡಿಸ್-ಅಡ್ಜಸ್ಟ್‌ಮೆಂಟ್' ಎನ್ನುವುದು ಬಹು ದೊಡ್ಡ ಮೂರ್ಖತನವಾಗಿದೆ. ಏಕೆಂದರೆ, ತಾನು ಯಜಮಾನನೆಂಬ ಅಹಂಕಾರವನ್ನು ಬಿಡಲು ಅವನು ಒಪ್ಪುವುದಿಲ್ಲ ಮತ್ತು ಅವನಿಗೆ ತನ್ನದೇ ನಡೆಯಬೇಕೆಂಬ ಹಠ. ಇದರಿಂದ ಜೀವನ ಅಧೋಗತಿಗೆ ತಲುಪುತ್ತದೆ ಹಾಗು ದುಃಖಮಯವಾಗುತ್ತದೆ! ಅದರ ಬದಲು ಸಹಜವಾಗಿ ಹೇಗೆ ನಡೆಯುತ್ತಿದೆಯೋ ಹಾಗೆ ನಡೆಯಲು ಬಿಡಿ! ಇದು ಕಲಿಯುಗ! ಹಾಗಾಗಿ ಹೆಂಡತಿ ನಿಮ್ಮನ್ನು 'ಕೆಲಸಕ್ಕೆ ಬಾರದವನೆಂದು' ಹೇಳಿದರೆ, ಆಗಲೂ 'ಹೌದು, ನೀನು ಹೇಳುವುದು ಸರಿ' ಎಂದು ಒಪ್ಪಿಕೊಂಡು ಬಿಡಿ.

# ವಕ್ರತೆಯ ಜೊತೆ ಅಡ್ಜಸ್ಟ್ ಆಗಿಬಿಡು

**ಪ್ರಶ್ನಕರ್ತ:** ವ್ಯವಹಾರದಲ್ಲಿ 'ಅಡ್ಜಸ್ಟ್‌ಮೆಂಟ್' ಒಬ್ಬರದೇ ಆಗಿರಬಾರದು ಅಲ್ಲವೇ?

**ದಾದಾಶ್ರೀ:** ವ್ಯವಹಾರದ ಹೆಸರೇ ಅಡ್ಜಸ್ಟ್ ಮಾಡಿಕೊಳ್ಳುವುದು. ಇದನ್ನು ನೋಡಿದ ನೆರೆಹೊರೆಯವರು ಕೂಡಾ ಹೇಳಬೇಕು, 'ಎಲ್ಲರ ಮನೆಯಲ್ಲಿ ಜಗಳವಾಡುತ್ತಾರೆ, ಆದರೆ ಈ ಮನೆಯವರು ಮಾತ್ರ ಜಗಳವಾಡುವುದಿಲ್ಲ' ಎಂದು. ಹಾಗಿದ್ದಾಗ ಮಾತ್ರ ವ್ಯವಹಾರ ಒಳ್ಳೆ ರೀತಿಯಲ್ಲಿ ನಡೆಯುತ್ತದೆ. ಯಾರೊಂದಿಗೆ ನಮಗೆ ಹೊಂದಾಣಿಕೆಯು ಆಗುವುದಿಲ್ಲವೋ ಅಲ್ಲಿ ಅವರೊಂದಿಗೆ ನಾವು ಹೊಂದಾಣಿಕೆಯ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಇಷ್ಟವಾಗುವಲ್ಲಿ ನಮಗೆ ಹೊಂದಿಕೊಂಡು ಹೋಗುವ ಶಕ್ತಿ ಇದ್ದೇ ಇರುತ್ತದೆ. ಆದರೆ, ಇಷ್ಟವಾಗದಿರುವುದು ನಮ್ಮ ದೌರ್ಬಲ್ಯವಾಗಿದೆ. ನನಗೆ (ದಾದಾಶ್ರೀ)

ಹೇಗೆ ಪ್ರತಿಯೊಬ್ಬರೊಂದಿಗೆ ಸರಿಹೊಂದುತ್ತದೆ? ನಾವು ಎಷ್ಟು ಅಡ್ಜಸ್ಟ್‌ಮೆಂಟ್ ಮಾಡುತ್ತೇವೋ, ಆಗ ಇನ್ನು ಹೆಚ್ಚಿನ ಶಕ್ತಿಯು ವೃದ್ಧಿಯಾಗುತ್ತದೆ ಹಾಗು ಶಕ್ತಿಹೀನತೆಯು ಮುರಿದು ಬೀಳುತ್ತದೆ. ನಿಜವಾದ ತಿಳುವಳಿಕೆ ಮೂಡಲು, ಬೇರೆಲ್ಲಾ ತಪ್ಪು ತಿಳುವಳಿಕೆಗಳಿಗೆ ಬೀಗ ಬಿದ್ದಾಗ ಮಾತ್ರವೇ ಸಾಧ್ಯ.

ಸರಿ ಹೊಂದುವಲ್ಲಿ ಯಾರೂ ಕೂಡ 'ಅಡ್ಜಸ್ಟ್' ಮಾಡಿಕೊಳ್ಳುತ್ತಾರೆ. ಆದರೆ ವಕ್ರತೆ–ಗಡಸು-ಘಾಟಿಗಳೊಂದಿಗೆ ಹಾಗು ಇನ್ನು ಯಾವುದೇ ರೀತಿಯ ಸ್ವಭಾವದೊಂದಿಗೆ 'ಅಡ್ಜಸ್ಟ್' ಆಗುವುದನ್ನು ಕಲಿತು ಬಿಟ್ಟರೆ, ಕೆಲಸವಾಗಿ ಬಿಡುತ್ತದೆ. ಎಷ್ಟೇ ಒರಟು ಜನರಾಗಿರಲಿ ಅವರೊಂದಿಗೆ ಅಡ್ಜಸ್ಟ್ ಮಾಡಿಕೊಳ್ಳಲು ಬಂದರೆ, ಆಗ ಅದು ವ್ಯವಹಾರ! ಅಲ್ಲಿ ನಿಷ್ಠುರ ಮಾಡುತ್ತಾ ಹೋದರೆ ನಡೆಯುವುದಿಲ್ಲ. ಜಗತ್ತಿನಲ್ಲಿ ಯಾರೂ ನಮಗೆ 'ಫಿಟ್' ಆಗುವುದಿಲ್ಲ. ನಾವು ಅವರಿಗೆ 'ಫಿಟ್' ಆಗಬೇಕು, ಆಗಲಷ್ಟೇ ಈ ಜಗತ್ತು ಸುಂದರ; ಮತ್ತು ಅವರನ್ನು 'ಫಿಟ್' ಮಾಡಲು ಹೋದರೆ, ಆಗ ಜಗತ್ತು ವಕ್ರವಾಗುತ್ತದೆ. ಹಾಗಾಗಿ 'ಅಡ್ಜಸ್ಟ್ ಎವ್ರಿವೇರ್'. ನಾವು ಎಲ್ಲರೊಂದಿಗೆ 'ಫಿಟ್' ಆಗಿಬಿಟ್ಟರೆ ತೊಂದರೆಯೇ ಇರುವುದಿಲ್ಲ.

## ಡೋಂಟ್ ಸೀ ಲಾ, ಸೆಟಲ್

ಜ್ಞಾನಿಗಳಂತೂ ಎದುರಿನ ವ್ಯಕ್ತಿಯು ವಕ್ರವಾಗಿದ್ದರೂ, ಅವರೊಂದಿಗೆ 'ಅಡ್ಜಸ್ಟ್' ಮಾಡಿಕೊಂಡುಬಿಡುತ್ತಾರೆ. ಹೀಗೆ ಜ್ಞಾನಿ ಪುರುಷರನ್ನು ನೋಡಿ ಅವರಂತೆ ನಡೆದರೆ ಎಲ್ಲಾ ರೀತಿಯಲ್ಲೂ 'ಅಡ್ಜಸ್ಟ್‌ಮೆಂಟ್' ಮಾಡಿಕೊಳ್ಳಲು ಬಂದುಬಿಡುತ್ತದೆ. ಇದರ ಹಿಂದಿರುವ ವಿಜ್ಞಾನವು ಹೇಳುತ್ತದೇನೆಂದರೆ, ವಿತರಾಗ್ (ರಾಗ-ದ್ವೇಷಗಳು ಇಲ್ಲದಿರುವುದು) ಆಗಿಬಿಡು. ರಾಗ-ದ್ವೇಷವನ್ನು ಮಾಡಲುಹೋಗಬೇಡ. ಅಲ್ಲಿ ತನ್ನೊಳಗೆ ಅದೇನೋ ಆಸಕ್ತಿಯು ತನ್ನೊಳಗೆ ಉಳಿದು ಕೊಂಡಿರುವುದರಿಂದಾಗಿ ಪೆಟ್ಟು ಬೀಳುತ್ತದೆ. ಈ ವ್ಯವಹಾರದಲ್ಲಿ ಏಕಪಕ್ಷೀಯ-ನಿಸ್ಪೃಹವಾಗಿದ್ದರೆ, ಅಲ್ಲಿ ಆಗ ಅದನ್ನು ಮೊಂಡುತನವೆಂದು ಕರೆಯಲಾಗುತ್ತದೆ. ಯಾವಾಗಲು ನಮಗೆ ಅಗತ್ಯವಿದ್ದಾಗ ಎದುರಿನವರು ಹಠಮಾರಿಗಳಾಗಿದ್ದರೂ, ಸಹ ನಾವು, ಅವರನ್ನು ಒಪ್ಪಿಕೊಳ್ಳಬೇಕಾಗುತ್ತದೆ. ರೈಲ್ವೆ ನಿಲ್ದಾಣದಲ್ಲಿ ಸಾಮಾನು ಹೊರುವ ಕೂಲಿಯವನೊಂದಿಗೆ ಚೌಕಾಸಿ ಮಾಡಿಕೊಂಡು ವ್ಯರ್ಥವಾಗಿ ನಿಲ್ಲುವ ಬದಲು ಏನೋ ಹೆಚ್ಚು ಕಡಿಮೆಗೆ ಒಪ್ಪಿಕೊಂಡುಬಿಡಬೇಕು. ಇಲ್ಲವಾದರೆ, ಸಾಮಾನಿನ ಚೀಲ ನಮ್ಮ ತಲೆಯ ಮೇಲೆ ನಾವೇ ಹೊರಬೇಕಾಗುತ್ತದೆ!

'ಡೋಂಟ್ ಸೀ ಲಾ, ಪ್ಲೀಸ್ ಸೆಟಲ್' ಎದುರಿನವರಿಗೆ ನಾವು ಸೆಟಲ್‌ಮೆಂಟ್ (ಅಡ್ಜಸ್ಟ್‌ಮೆಂಟ್) ಹೀಗೆ ಮಾಡಿ ಹಾಗೆ ಮಾಡಿ ಎಂದು ಹೇಳಿಕೊಂಡು ಕೂರಲು ಸಮಯವಾದರೂ, ಎಲ್ಲಿದೆ? ಎದುರಿನವರಲ್ಲಿ ನೂರು ತಪ್ಪುಗಳಿದ್ದರೂ

ನಮ್ಮದೇ ತಪ್ಪೆಂದು ತಿಳಿದು ಮುಂದೆ ಸಾಗಬೇಕು. ಈ ಕಾಲದಲ್ಲಿ ಲಾ, 'ಕಾನೂನು' ಎಂದು ನೋಡಲು ಏನಿದೆ? ಈಗಂತೂ ಎಲ್ಲವೂ ಎಲ್ಲೆ ಮೀರಿ ಹೋಗಿದೆ. ಎಲ್ಲಿ ನೋಡಿದರಲ್ಲಿ ಪೈಪೋಟಿ ಹಾಗು ಅಲೆದಾಟ! ಜನರು ಸಮಸ್ಯೆಗಳಿಂದ ಸುತ್ತುವರೆದಿದ್ದಾರೆ. ಮನೆಗೆ ಹೋದರೆ ಹೆಂಡತಿಯ ಗೊಣಗಾಟ, ಮಕ್ಕಳ ಬೇಡಿಕೆ; ಕೆಲಸಕ್ಕೆ ಹೋದರೆ ಮಾಲೀಕನ ನಿಂದನೆ, ರೈಲ್ ನಲ್ಲಿ ಅಥವಾ ಬಸ್ ನಲ್ಲಿ ಜನರ ನಡುವೆ, ನೂಕು ನುಗ್ಗಲಿನಲ್ಲಿ ಹೋರಾಟ! ಎಲ್ಲಿಯೂ ನಿರಾಳ ಇಲ್ಲ. ನೆಮ್ಮದಿ ಅನ್ನುವುದು ಬೇಕಲ್ಲವೇ? ಯಾರಾದರು ಹೊಡೆದಾಡುತ್ತಿದ್ದರೆ ಆಗ ಅವರ ಬಗ್ಗೆ ನಮಗೆ ದಯೆ ಉಂಟಾಗುತ್ತದೆ, 'ಓಹೋಹೋ, ಅವರು ಅದೆಷ್ಟೆಲ್ಲಾ ನಿರಾಶೆ ಹೊಂದಿರಬಹುದು, ಆದ್ದರಿಂದ ಹೊಡೆದಾಡಿಕೊಳ್ಳುತ್ತಿದ್ದಾರೆ!'. ಈ ನಿರಾಶೆಯಿಂದಾಗಿ ಎಲ್ಲಾ ದುರ್ಬಲತೆಗಳು.

# ಆರೋಪಣೆ ಬೇಡ, 'ಅಡ್ಜಸ್ಟ್'

ಮನೆಯಲ್ಲಿ 'ಅಡ್ಜಸ್ಟ್' ಮಾಡಿಕೊಳ್ಳುವುದನ್ನು ನೀವು ಕಲಿತಿರಬೇಕು. ನೀವು ಸತ್ಸಂಗದಿಂದ ತಡವಾಗಿ ಮನೆಗೆ ಹೋದಾಗ, ಮನೆಯವರು ಏನು ಹೇಳುತ್ತಾರೆ ಎನ್ನುವ ವಿವೇಚನೆ ಇರಬೇಕು. ಸ್ವಲ್ಪವಾದರೂ ಸಮಯದ ಬಗ್ಗೆ ಎಚ್ಚರಿಕೆ ವಹಿಸಬೇಕಲ್ಲವೇ? ಅಂತಹ ಗಳಿಗೆಯಲ್ಲಿ, ಸಮಯಕ್ಕಿಂತ ಸ್ವಲ್ಪ ಮೊದಲೇ ಮನೆಗೆ ಹೋಗಿ ಬಿಡುವುದು ಒಳಿತಲ್ಲವೇ? ಹಿಂದೆ, ಹೊಲದಲ್ಲಿ ಎತ್ತುಗಳು ಮುಂದಕ್ಕೆ ಹೆಜ್ಜೆಯಿಡದೆ ನಿಂತಾಗ, ಬಾರುಕೋಲನ್ನು ಬೀಸಿದರೆ ಸಾಕು ಎತ್ತುಗಳು ಮುಂದೆಹೋಗಲು ಪ್ರಾರಂಭಿಸುತ್ತಿದ್ದವು. ಹೊಡೆತ ಬೀಳುವ ಮೊದಲೇ ಅವುಗಳು ಮುಂದೆ ನಡೆದಿದ್ದರೆ, ಅವನು ಹೊಡೆಯುತ್ತಿರಲಿಲ್ಲ! ವಿಧಿಯಿಲ್ಲದೆ ಅವನು ಮೊದಲು ಹೊಡೆಯಲೇ ಬೇಕು ಆಗಲೇ ಅವು ಮುಂದಕ್ಕೆ ಹೆಜ್ಜೆಹಾಕುತ್ತವೆ. ಅವು ಮುಂದೆಹೋಗಲೇ ಬೇಕಾಗಿದೆ ಅಲ್ಲವೇ? ಇದನ್ನು ನೀವು ನೋಡಿರಬಹುದಲ್ಲವೇ? ಆ ಬಾರುಕೋಲಿನ ತುದಿಗೆ ಮೊಳೆ (ಕಬ್ಬಿಣದ ತಂತಿ) ಇರುತ್ತದೆ ಹಾಗು ಅದರಿಂದ ಹೆಚ್ಚು ಪೆಟ್ಟು ಬೀಳುತ್ತದೆ. ಪಾಪ, ಮೂಕ ಪ್ರಾಣಿ ಏನು ಮಾಡುತ್ತದೆ? ಅದು ಯಾರ ಮೇಲೆ ದೂರು ಹೇಳುತ್ತದೆ?

ಮನುಷ್ಯನಿಗೇನಾದರೂ ಹೊಡೆಯಲು ಹೋದರೆ, ಬೇರೆ ಯಾರಾದರು ಬಂದು ಬಿಡಿಸುತ್ತಾರೆ. ಆದರೆ, ಬಡಪಾಯಿ ಎತ್ತಿನ ಆಕ್ಷೇಪಣೆಯನ್ನು ಕೇಳುವವರು ಯಾರು? ಆ ಮೂಕ ಪ್ರಾಣಿ ಏಕೆ ಇಷ್ಟು ಹಿಂಸೆಗೆ ಒಳಗಾಗಬೇಕು? ಏಕೆಂದರೆ, ಹಿಂದೆ ಬಹಳಷ್ಟು ನಿಂದನೆ ಮಾಡಿತ್ತು. ಈಗ ಅದರ ಪರಿಣಾಮದ ಫಲವು ಬಂದಿದೆ. ಆಗಿನ ಅಧಿಕಾರವನ್ನು ಆರೋಪಣೆ ಮಾಡುತ್ತಾ ದುರುಪಯೋಗವನ್ನು ಮಾಡಿರುವ ಕಾರಣದಿಂದ, ಈಗ ಹೇಳಿಕೊಳ್ಳುವ ಅಧಿಕಾರವಿಲ್ಲದೆ, ಆರೋಪಣೆ ಮಾಡಲಾಗದೆ ಜೀವಿಸಬೇಕಾಗಿದೆ. ಈಗ

ಅದನ್ನು ಮೈನಸ್-ಪ್ಲಸ್ ಮಾಡಬೇಕಾಗಿದೆ. ಅದರ ಬದಲು, ಮೊದಲೇ ಆರೋಪಣೆ ಮಾಡದೇಯಿದಿದ್ದರೆ, ಏನು ಕಳೆದು ಕೊಳ್ಳುವುದಿತ್ತು? ದೂಷಣೆ ಮಾಡಿದರೆ ಆರೋಪಿಯಾಗುವ ಸಮಯ ಬರುತ್ತದ ಅಲ್ಲವೇ? ನಾವು ಆರೋಪಿಯಾಗುವುದು ಬೇಡ, ಆರೋಪಣೆಯನ್ನು ಮಾಡುವುದುಬೇಡ. ಎದುರಿನವರು ನಿಂದಿಸಲು ಪ್ರಾರಂಭಿಸಿದಾಗ, ಅದನ್ನು ಅಲ್ಲಿ, ಜಮಾ ಮಾಡಿಕೊಳ್ಳುವುದರಿಂದ, ಆರೋಪ ಹೊರೆಸುವ ಅವಕಾಶವೇ ಇರುವುದಿಲ್ಲ! ನಿಮಗೆ ಹೇಗೆ ಅನ್ನಿಸುತ್ತದೆ? ಆರೋಪಣೆ ಮಾಡುವುದು ಸರಿಯೇ? ಅದರ ಬದಲು, ಮೊದಲೇ 'ಅಡ್ಜಸ್ಟ್' ಮಾಡಿಕೊಂಡರೆ ಆಗ ನಾವು ಕಳೆದು ಕೊಳ್ಳುವುದಾದರೂ ಏನು?

# ತಪ್ಪು ಮಾತನಾಡಿದ ಮೇಲೂ ಉಪಾಯವಿದೆ

ವ್ಯವಹಾರದಲ್ಲಿ 'ಅಡ್ಜಸ್ಟ್‌ಮೆಂಟ್' ಮಾಡಿಕೊಳ್ಳುವುದು ಕೂಡಾ, ಈ ಕಾಲದಲ್ಲಿ ಅದನ್ನು ಜ್ಞಾನವೆಂದು ಕರೆಯಲಾಗಿದೆ. ಹಾಗಾಗಿ 'ಅಡ್ಜಸ್ಟ್‌ಮೆಂಟ್' ಮಾಡಿಕೊಳ್ಳಬೇಕು. ಅಡ್ಜಸ್ಟ್‌ಮೆಂಟ್ ತುಂಡಾಗುವಂತಿದ್ದರೂ, ಅಲ್ಲಿ ಅಡ್ಜಸ್ಟ್ ಮಾಡಿಕೊಂಡುಬಿಡಬೇಕು. ನಾವು ಎಂದಾದರು ಯಾರೊಂದಿಗಾದರು ಕೆಟ್ಟದಾಗಿ ಮಾತನಾಡಿದರೆ, ಅದು ನಮಗೆ ತಿಳಿಯದೆ ಆಕ್ಷಣದಲ್ಲಿ ಮಾತನಾಡಿ ಬಿಡಲಾಗುತ್ತದೆ, ಅದು ನಮ್ಮ ಹಿಡಿತದಲ್ಲಿರುವುದಿಲ್ಲ. ಎಂದಾದರು ನಿಮ್ಮಿಂದ ಹೇಳಬಾರದೆಂದಿದ್ದರೂ ಹೇಳಿಬಿಟ್ಟಿರುವುದಿದೆಯೋ? ಅಲ್ಲಿ, ಹೇಳಿದ ಮೇಲೆ ತಕ್ಷಣವೇ ಅರಿವಿಗೆ ಬರುತ್ತದೆ, ತಪ್ಪಾಗಿದೆ ಎಂದು. ಅದು ಅರಿವಿಗೆ ಬಾರದೆ ಇರುವುದಿಲ್ಲ. ಆದರೆ, ಆ ಕೂಡಲೇ ನಾವು 'ಅಡ್ಜಸ್ಟ್' ಮಾಡಿ (ಸರಿಮಾಡಿ) ಕೊಳ್ಳಲು ಹೋಗುವುದಿಲ್ಲ. ಆಗ ತಕ್ಷಣವೇ ಅವರ ಬಳಿಗೆ ಹೋಗಿ ಕ್ಷಮೆಯಾಚಿಸಿಬಿಡಬೇಕು. ಹೇಗೆಂದರೆ, 'ಗೆಳೆಯ, ಆ ಸಮಯದಲ್ಲಿ ನಾನು ಕೆಟ್ಟದಾಗಿ ಮಾತನಾಡಿಬಿಟ್ಟೆ, ಅದಕ್ಕಾಗಿ ನನ್ನನ್ನು ದಯಮಾಡಿ ಕ್ಷಮಿಸಿಬಿಡು' ಎಂದು ಕ್ಷಮೆ ಕೇಳಿದಾಗ ಅಡ್ಜಸ್ಟ್ ಆದಂತೆ. ಇದರಿಂದ ನಿಜವಾಗಿ ಏನಾದರೂ ತೊಂದರೆಯಿದೆಯೇ?

**ಪ್ರಶ್ನಕರ್ತ:** ಇಲ್ಲ, ಸ್ವಲ್ಪವೂ ಕೂಡಾ ತೊಂದರೆಯಿಲ್ಲ.

# ಎಲ್ಲೆಡೆಯೂ 'ಅಡ್ಜಸ್ಟ್‌ಮೆಂಟ್' ಮಾಡಬಹುದು

**ಪ್ರಶ್ನಕರ್ತ:** ಒಮ್ಮೊಮ್ಮೆ ಪ್ರಸಂಗಗಳು ಹೇಗೆ ಬರುತ್ತವೆಂದರೆ, ಒಂದೇ ಸಮಯದಲ್ಲಿ ಇಬ್ಬಿಬ್ಬರೊಂದಿಗೆ 'ಅಡ್ಜಸ್ಟ್‌ಮೆಂಟ್' ಒಂದೇ ವಿಷಯದ ಬಗ್ಗೆ ಮಾಡಿಕೊಳ್ಳಬೇಕಾಗುತ್ತದೆ. ಆಗ, ಆ ವೇಳೆಯಲ್ಲಿ ಇಬ್ಬರ ವಿಚಾರವನ್ನು ಹೇಗೆ ಸಮರ್ಪಕವಾಗಿ ನಿಭಾಯಿಸುವುದು?

**ದಾದಾಶ್ರೀ:** ಇಬ್ಬರೊಂದಿಗೂ ಒಟ್ಟಿಗೆ ನಿಭಾಯಿಸಬಹುದು. ಇಬ್ಬರೇ ಏನೂ, ಒಮ್ಮೆಗೆ ಏಳು ವ್ಯಕ್ತಿಗಳಿದ್ದು, ಅವರೊಂದಿಗೆ ನಿರ್ವಹಿಸಬೇಕಾಗಿ ಬಂದರೂ ನಿಭಾಯಿಸಬಹುದು. ಒಬ್ಬ ಕೇಳುತ್ತಾನೆ, 'ನನ್ನ ಕೆಲಸ ಏನು ಮಾಡಿದೆ?', ಆಗ ಹೇಳಿ 'ಆಗಬಹುದು, ನೀವು ಹೇಳಿದ ಹಾಗೆಯೇ ಮಾಡುತ್ತಿದ್ದೇನೆ' ಎಂದು. ಇನ್ನೊಬ್ಬನಿಗೂ ಹಾಗೆಯೇ ಹೇಳಿ, 'ನೀವು ಹೇಳಿದ ರೀತಿಯಲ್ಲಿಯೇ ಮಾಡುತ್ತಿದ್ದೇನೆ' ಎಂದು. ಅಲ್ಲದೆ ಎಲ್ಲಾ 'ವ್ಯವಸ್ಥಿತ್', ಅದರ ನಿಯಮ ಮೀರಿ ಏನೂ ಆಗುವುದಿಲ್ಲ. ಹಾಗಾಗಿ, ಸುಮ್ಮನೆ ಜಗಳದ ವಾತಾವರಣವನ್ನು ಉಂಟುಮಾಡುವುದುಬೇಡ. ಅಲ್ಲಿ ಮುಖ್ಯವಾಗಿ ಮಾಡಬೇಕಾಗಿರುವುದು 'ಅಡ್ಜಸ್ಟ್‌ಮೆಂಟ್'. ಇದರಿಂದಲೇ ಮುಕ್ತಿ! ನೀವು ಆಯಿತು ಎಂದು ಹೇಳಿದರೂ, ಅಲ್ಲಿ 'ವ್ಯವಸ್ಥಿತ್' ಎನ್ನುವ ನಿಯಮದಿಂದ ಆಚೆಗೆ ಏನಾದರು ನಡೆಯಲು ಸಾಧ್ಯವೇ? ಆದರೆ, ಅಲ್ಲಿ ನೀವೇನಾದರೂ ಅವರಿಗೆ ಇಲ್ಲವೆಂದು ಹೇಳಿದರೇ, ಮಹಾ ಉಪಾಧಿ!

ಮನೆಯಲ್ಲಿ ಇಬ್ಬರೂ ನಿಶ್ಚಯವನ್ನು ಮಾಡಿಕೊಳ್ಳಬೇಕು. ಏನೆಂದರೆ, ನಾನು 'ಅಡ್ಜಸ್ಟ್' ಮಾಡಿಕೊಂಡು ಹೋಗುತ್ತೇನೆ ಎಂದು. ಆಗ, ಎಲ್ಲಾ ವಿಚಾರಗಳಲ್ಲಿ ಇಬ್ಬರ ಸಮ್ಮತಿ ಇರುತ್ತದೆ. ಒಬ್ಬರು ಹೆಚ್ಚು ಹಠ ಹಿಡಿದರೆ ಅದಕ್ಕೆ ಮತ್ತೊಬ್ಬರು 'ಅಡ್ಜಸ್ಟ್' ಮಾಡಿಕೊಂಡುಬಿಟ್ಟರೆ ಸಮಸ್ಯೆಯೇ ಇರುವುದಿಲ್ಲ. ವ್ಯಕ್ತಿಗೆ, ತನ್ನ ಒಂದು ಕೈ ನೋವಾಗುತ್ತಿದ್ದು, ಅದನ್ನು ಅವನು ಹೇಗೆ ಬೇರೆಯವರಿಗೆ ಹೇಳದೆ, ತನ್ನ ಇನ್ನೊಂದು ಕೈನಿಂದ ಮಾಲೀಸು ಮಾಡುತ್ತಾ 'ಅಡ್ಜಸ್ಟ್' ಮಾಡಿಕೊಳ್ಳುತ್ತಾನೆ. ಆ ರೀತಿಯಾಗಿ 'ಅಡ್ಜಸ್ಟ್-ಎವ್ರಿವೇರ್' ಎಲ್ಲೆಡೆ ಮಾಡಿಕೊಳ್ಳದೆ ಇರುವುದೆಲ್ಲವೂ ಹುಚ್ಚುತನವಾಗಿದೆ. ಎದುರಿನವರಿಗೆ ತೊಂದರೆಗೆ ಒಳಪಡಿಸುವುದೇ, ಹುಚ್ಚುತನವಾಗಿದೆ. ನೀವು ನಾಯಿಗೆ ಒಂದು ಬಾರಿ, ಎರಡು ಬಾರಿ ಅಥವಾ ಮೂರು ಬಾರಿ ಕೀಟಲೆ ಮಾಡಿದರೂ ಅದು ಸುಮ್ಮನಿರುತ್ತದೆ. ಆದರೆ, ಅದಕ್ಕೆ ಪದೇ ಪದೇ ಕೀಟಲೆ ಮಾಡಿದಾಗ, ಅದು ಒಂದು ದಿನ ಮೈಮೇಲೆ ಹಾರಿ ಕಚ್ಚಿಬಿಡುತ್ತದೆ. ಅದಕ್ಕೆ ತಿಳಿಯುತ್ತದೆ, 'ಇವನು ದಿನಾ ಹಿಂಸೆಕೊಡುತ್ತಾನೆ; ಇವನು ಸರಿಯಿಲ್ಲ, ಇವನೊಬ್ಬ ಅಯೋಗ್ಯ'. ಈ ಉದಾಹರಣೆಯನ್ನು ಅರ್ಥಮಾಡಿಕೊಂಡು ಜೀವನದಲ್ಲಿ ಯಾರಿಗೂ ತೊಂದರೆಯಾಗದ ರೀತಿಯಲ್ಲಿ ಹೊಂದಾಣಿಕೆ ಮಾಡಿಕೊಂಡು 'ಅಡ್ಜಸ್ಟ್ ಎವ್ರಿವೇರ್' ಆಗಿಬಿಡಬೇಕು.

ಯಾರು 'ಅಡ್ಜಸ್ಟ್' ಆಗುವ ಕಲೆಯನ್ನು ಅರಿತಿರುತ್ತಾರೋ, ಅವರು, ಈ ಜಗತ್ತಿನಿಂದದಾಚೆಗೆ ಮೋಕ್ಷದೆಡೆಗೆ ಬಾಗಿರುತ್ತಾರೆ. 'ಅಡ್ಜಸ್ಟ್‌ಮೆಂಟ್' ಮಾಡಿಕೊಳ್ಳುವುದು ಸಹ ಒಂದು ರೀತಿಯ ಜ್ಞಾನವೆಂದು ಕರೆಯಲ್ಪಡುತ್ತದೆ. ಯಾರು 'ಅಡ್ಜಸ್ಟ್‌ಮೆಂಟ್' ಮಾಡಿಕೊಳ್ಳುತ್ತಾರೋ, ಅವರು ಈ ಭವಸಾಗರವನ್ನು ದಾಟಿದಂತೆ. ಯಾವುದನ್ನು ಅನುಭವಿಸಬೇಕಾಗಿದೆ ಅದನ್ನು ಅನುಭವಿಸಿಯೇ

ಮುಗಿಸಬೇಕಾಗಿದೆ. ಅಲ್ಲಿ 'ಅಡ್ಜಸ್ಟ್ಮೆಂಟ್' ಮಾಡುವುದು ಬಂದುಬಿಟ್ಟರೆ, ಯಾವ ತೊಂದರೆಯೂ ಇರುವುದಿಲ್ಲ. ಅಲ್ಲದೆ, ಎಲ್ಲಾ ಲೆಕ್ಕಾಚಾರಗಳಿಂದ ಮುಕ್ತರಾಗುತ್ತೇವೆ. ಅಲ್ಲಿ ದರೋಡೆಕೋರನೊಂದಿಗೆ 'ಡಿಸ್-ಅಡ್ಜಸ್ಟ್ಮೆಂಟ್' ಮಾಡಿದರೆ, ಅವನಿಂದ ಥಳಿಸಿಕೊಳ್ಳಬೇಕಾಗುತ್ತದೆ. ಹಾಗಾಗುವುದಕ್ಕಿಂತ ನಾವೇ ಮೊದಲಿಗೆ 'ಅಡ್ಜಸ್ಟ್' ಆಗಬೇಕೆಂದು ನಿರ್ಧರಿಸಿ ಅವನೊಂದಿಗೆ ಮಾತನಾಡಿ, 'ನಿನಗೇನು ಬೇಕಾಗಿದೆ? ನಾವು ಯಾತ್ರೆಗೆ ಹೊರಟಿದ್ದೇವೆ. ನಿನಗೆ ಏನು ಬೇಕೋ ತೆಗೆದುಕೊಂಡುಬಿಡು' ಎಂದು ಹೇಳಿ, ಆತನಿಂದ ಬಿಡಿಸಿಕೊಳ್ಳಬೇಕು.

ಹೆಂಡತಿಯು ತಯಾರಿಸಿದ ಅಡಿಗೆಯನ್ನು ಟೀಕಿಸುವುದು ತಪ್ಪು, ಅಲ್ಲದೆ ಹಾಗೆಂದು ಆಕ್ಷೇಪಣೆಯನ್ನು ಮಾಡಬಾರದು. ತಾವು ಎಂದೂ ತಪ್ಪೇ ಮಾಡಿಲ್ಲದವರಂತೆ ಮಾತನಾಡುದು ತಪ್ಪು, ಅಲ್ಲಿ 'ಅಡ್ಜಸ್ಟ್' ಮಾಡಿಕೊಳ್ಳಲು ಕಲಿಯಬೇಕು. ಬಾಳಸಂಗಾತಿಯಾಗಿ ಇರಬೇಕಾದಲ್ಲಿ, 'ಅಡ್ಜಸ್ಟ್ಮೆಂಟ್' ಬೇಕೋ ಬೇಡವೋ? ನಮ್ಮಿಂದ ಇನ್ನೊಬ್ಬರಿಗೆ ದುಃಖಪಡಿಸುವುದನ್ನು ಭಗವಾನ್ ಮಹಾವೀರರ ಧರ್ಮವೆಂದು ಹೇಗೆ ಹೇಳುವುದು? ಆದುದರಿಂದ, ಮನೆಯಲ್ಲಿನ ವ್ಯಕ್ತಿಗಳಿಗೆ ದುಃಖವಾಗದ ರೀತಿಯಲ್ಲಿ ನಡೆದುಕೊಳ್ಳಬೇಕು .

# ಮನೆಯೊಂದು ಹೂದೋಟ

ಒಬ್ಬರು ನನ್ನಲ್ಲಿಗೆ ಬಂದು ದೂರು ಹೇಳುತ್ತಾರೆ, 'ದಾದಾ, ನನ್ನ ಹೆಂಡತಿ ಹಾಗೆ ಮಾಡುತ್ತಾಳೆ, ಹೀಗೆ ಮಾಡುತ್ತಾಳೆ' ಎಂದು. ನಾನು ಅವನ ಹೆಂಡತಿಯನ್ನೂ ಕೇಳಿದೆ, ಆಗ ಅವಳು 'ನನ್ನ ಗಂಡನಿಗೆ ಬುದ್ಧಿ ಸರಿಯಿಲ್ಲ' ಎಂದು ಆರೋಪಿಸಿದಳು. ಹೀಗಿರುವಾಗ, ಅದರಲ್ಲಿ ನೀವು, ನಿಮ್ಮೊಬ್ಬರದ್ದೇ ನ್ಯಾಯವನ್ನು ಹುಡುಕಲು ಯಾಕೆ ಹೋಗುವಿರಿ ? ಆದರೂ ಬಿಡದೆ ಅವನು ಹೇಳಲಾರಂಭಿಸಿದ, 'ನನ್ನ ಮನೆಯಂತೂ ಪೂರ್ತಿ ಹಾಳಾಗಿದೆ. ಮಕ್ಕಳು ಕೆಟ್ಟುಹೋಗಿದ್ದಾರೆ, ಹೆಂಡತಿ ಸರಿಯಿಲ್ಲ' ಎಂದು. ಆಗ ನಾನು ಉತ್ತರಿಸಿದೆ, 'ಏನೂ ಹಾಳಾಗಿಲ್ಲ, ನಿನಗೆ ನೋಡಿಕೊಳ್ಳಲು ಬರುವುದಿಲ್ಲ. ನಿನ್ನ ಮನೆಯನ್ನು ನೋಡಿಕೊಳ್ಳುವುದು ನಿನಗೆ ಬರಬೇಕು. ಪ್ರತಿಯೊಬ್ಬರ ಪ್ರಕೃತಿಯನ್ನು ಅರ್ಥಮಾಡಿಕೊಳ್ಳುವುದನ್ನು ನೀನು ಕಲಿತಿರಬೇಕು'.

ಮನೆಯಲ್ಲಿ 'ಅಡ್ಜಸ್ಟ್ಮೆಂಟ್' ಆಗದಿರಲು ಕಾರಣವೇನು? ಕುಟುಂಬದಲ್ಲಿ ತುಂಬಾ ವ್ಯಕ್ತಿಗಳಿರುತ್ತಾರೆ, ಅವರೆಲ್ಲರೊಂದಿಗೆ ಹೊಂದಾಣಿಕೆ ಬರುವುದಿಲ್ಲ. ಪ್ರತಿಯೊಬ್ಬರ ಸ್ವಭಾವದಲ್ಲಿಯು ವ್ಯತ್ಯಾಸವಿರುತ್ತದೆ. ಕಾಲಕ್ಕೆ ತಕ್ಕಂತೆ ಸ್ವಭಾವವಿರುತ್ತದೆ. ಸತ್ಯಯುಗದಲ್ಲಿ ಎಲ್ಲರೂ ಒಟ್ಟಿಗೆ ವಾಸಮಾಡುತ್ತಿದ್ದರು. ಮನೆಯಲ್ಲಿ ನೂರು ಮಂದಿ ಇದ್ದರೂ, ಎಲ್ಲರೂ ಮನೆಯಲ್ಲಿನ ಹಿರಿಯರು ಹೇಳಿದ್ದನ್ನು ಅನುಸರಿಸುತ್ತಿದ್ದರು. ಆದರೆ, ಈ ಕಲಿಯುಗದಲ್ಲಿ ಹಿರಿಯರು

ಹೇಳಿದ್ದಕ್ಕೆ ತಿರುಗಿ ಉತ್ತರಿಸುತ್ತಾರೆ. ಸ್ವಂತ ತಂದೆಯೇ ಹೇಳಿದರೂ, ಅವರಿಗೆ ಬೆಲೆಕೊಡುವುದಿಲ್ಲ, ಇದು ಕಲಿಯುಗದ ಪ್ರಭಾವವಾಗಿದೆ.

ಈಗಿನ ಕಾಲದ ಜನರು ಸಹ ಮನುಷ್ಯರೇ ಆಗಿದ್ದಾರೆ. ಆದರೆ, ನಿಮಗೆ ಅವರನ್ನು ಅರ್ಥಮಾಡಿಕೊಳ್ಳಲು ಬರುವುದಿಲ್ಲ. ಮನೆಯಲ್ಲಿ ಐವತ್ತು ಜನರಿರುತ್ತಾರೆ, ಆದರೆ ಅವರನ್ನು ಅರ್ಥಮಾಡಿಕೊಳ್ಳಲಾಗದ ಕಾರಣದಿಂದಾಗಿ ಮನಸ್ತಾಪಗಳು ಉಂಟಾಗುತ್ತವೆ. ಸ್ವಭಾವಗಳನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಲ್ಲವೇ? ಮನೆಯಲ್ಲಿನ ಒಬ್ಬ ವ್ಯಕ್ತಿ ಸಿಡಿಮಿಡಿಗೊಳ್ಳುತ್ತಿದ್ದರೆ, ಅದು ಅವನ ಸ್ವಭಾವವೆಂದು ನೀವು ಅರಿಯಬೇಕು. ಒಮ್ಮೆ ಒಬ್ಬರ ಸ್ವಭಾವ ಹಾಗೆಂದು ತಿಳಿದ ಮೇಲೆ ಪದೇ ಪದೇ ಅವರನ್ನು ಆಕ್ಷೇಪಿಸುವುದು ಸರಿಯೇ? ಕೆಲವರಿಗೆ ರಾತ್ರಿ ತಡವಾಗಿ ಮಲಗುವ ಅಭ್ಯಾಸವಿರುತ್ತದೆ ಮತ್ತೆ ಕೆಲವರಿಗೆ ಬೇಗನೆ ಮಲಗುವ ಅಭ್ಯಾಸವಿರುತ್ತದೆ. ಆಗ, ಅಲ್ಲಿ ಹೊಂದಾಣಿಕೆ ಹೇಗೆ ಬರಲು ಸಾಧ್ಯ? ಅಲ್ಲದೆ, ಕುಟುಂಬದ ಎಲ್ಲಾ ಸದಸ್ಯರು ಒಟ್ಟಿಗಿರುವಾಗ ಏನು ಮಾಡುವುದು? ಮನೆಯಲ್ಲಿ ಒಬ್ಬರು 'ನಿನಗೆ ಬುದ್ಧಿ ಕಡಿಮೆ' ಎಂದು ಹೇಳಿದರೆ, ಅಂತಹ ಸಮಯದಲ್ಲಿ ನೀವು ಅವರ ಸ್ವಭಾವವನ್ನು ಅರ್ಥಮಾಡಿಕೊಂಡು ನೀವೇ 'ಅಡ್ಜಸ್ಟ್' ಮಾಡಿಕೊಂಡುಬಿಡಬೇಕು. ಅದುಬಿಟ್ಟು ಅವರು ಹೇಳಿದ್ದಕ್ಕೆಲ್ಲಾ ನೀವು ಪ್ರತ್ಯುತ್ತರ ಕೊಡುತ್ತಾಹೋದರೆ, ನಿಮಗೇ ಆಯಾಸವಾಗುತ್ತದೆ. ಯಾಕೆಂದರೆ, ತಾಕಿಸಿ (ಹೊಡೆದು) ಕೊಂಡು ಹೋಗುವುದು ಅವರ ಸ್ವಭಾವ; ನೀವೂ ಅವರನ್ನು ತಾಕಿಸಿಕೊಂಡು ಹೋದರೆ, ನಿಮಗೂ ಕಣ್ಣಿಲ್ಲವೆನ್ನುವುದು ಖಚಿತವಾಯಿತಲ್ಲವೇ? ಇಲ್ಲಿ ನಾನು ಹೇಳುವುದೇನೆಂದರೆ, ಪ್ರಕೃತಿಯ ವಿಜ್ಞಾನವನ್ನು ಅರಿಯಿರಿ. ಅದಲ್ಲದೆ, ಈ ಆತ್ಮ ಎನ್ನುವುದು ಬೇರೆಯೇ ವಸ್ತುವಾಗಿದೆ.

# ಹೂದೋಟದಲ್ಲಿನ ಹೂವುಗಳ ಬಣ್ಣ-ಸುಗಂಧ ಬೇರೆ ಬೇರೆ

ಈಗ ನಿಮ್ಮ ಮನೆಯೊಂದು ಹೂದೋಟವಿದ್ದಂತೆ. ಹಿಂದೆ ಸತ್ಯಯುಗ, ದ್ವಾಪರಯುಗ ಹಾಗು ತ್ರೇತಾಯುಗದಲ್ಲಿ, ಮನೆಯೊಂದು ಕೃಷಿ-ಭೂಮಿಯಾಗಿತ್ತು; ಒಂದೆಡೆ ಎಲ್ಲಾ ಗುಲಾಬಿಹೂವಿನ ಗಿಡಗಳಾಗಿದ್ದರೆ, ಮತ್ತೊಂದೆಡೆ ಎಲ್ಲಾ ಸಂಪಿಗೆಯ ಗಿಡಗಳಾಗಿದ್ದವು. ಆದರೆ ಈಗ ಮನೆಯೆಂದರೆ, ಎಲ್ಲಾ ವಿಧವಾದ ಹೂವುಗಳಿಂದ ತುಂಬಿರುವ ಒಂದು ಹೂದೋಟ ಇದ್ದಂತೆ. ಅಲ್ಲಿ ನಾವು, ಇದು ಮಲ್ಲಿಗೆಯೋ ಅಥವಾ ಗುಲಾಬಿಯೋ ಎಂದು ಪರೀಕ್ಷಿಸಿ ನೋಡಬೇಕಾಗುತ್ತದೆ ಅಲ್ಲವೇ? ಸತ್ಯಯುಗದಲ್ಲಿ ಹೇಗಿತ್ತೆಂದರೆ, ಒಂದು ಮನೆಯಲ್ಲಿ ಗುಲಾಬಿಯೆಂದರೆ ಅಲ್ಲಿ ಎಲ್ಲಾ ಗುಲಾಬಿಯೇ ಹಾಗು ಇನ್ನೊಂದು ಮನೆಯಲ್ಲಿ ಮಲ್ಲಿಗೆಯೆಂದರೆ ಅಲ್ಲಿ

ಎಲ್ಲಾ ಮಲ್ಲಿಗೆಯೇ ಇರುತ್ತಿತ್ತು. ಒಂದು ಕುಟುಂಬವೆಂದರೆ, ಒಂದೇ ಕೃಷಿ-ಭೂಮಿಯ ಗುಲಾಬಿಹೂವಿನ ಗೊಂಚಲಾಗಿರುತ್ತಿತ್ತು. ಹಾಗಾಗಿ ಅಂತಹ ಕುಟುಂಬಗಳಲ್ಲಿ ಏನೂ ತೊಂದರೆಯೇ ಇರುತ್ತಿರಲಿಲ್ಲ. ಆದರೆ ಈಗ ಮನೆ, ಎನ್ನುವುದು ಒಂದು ಹೂದೋಟದಂತಾಗಿದೆ. ಒಂದೇ ಮನೆಯಲ್ಲಿ ಒಂದು ಗುಲಾಬಿಯಾದರೆ ಇನ್ನೊಂದು ಮಲ್ಲಿಗೆ; ಮೊದಲಿಗೆ ಗುಲಾಬಿಯು ಗಲಾಟೆ ಮಾಡುತ್ತದೆ 'ಯಾಕೆ ಮಲ್ಲಿಗೆಯು ನನ್ನಹಾಗಿಲ್ಲ? ಅದು ಕೇವಲ ಬಿಳಿಯ ಬಣ್ಣದ್ದಾಗಿದೆ. ಆದರೆ, ನನ್ನ ಬಣ್ಣ ಎಷ್ಟು ಸುಂದರವಾಗಿದೆ'ಎಂದು. ಆಗ ಮಲ್ಲಿಗೆ ಹೇಳುತ್ತದೆ, 'ಗುಲಾಬಿಹೂವು ಪೂರ್ತಿ ಮುಳ್ಳಿನಿಂದ ಕೂಡಿರುವೆ' ಎಂದು. ಗುಲಾಬಿ ಗಿಡದಲ್ಲಿ ಮುಳ್ಳು ಇರಲೇ ಬೇಕು ಹಾಗು ಮಲ್ಲಿಗೆಯ ಬಳ್ಳಿಯು ಮುಳ್ಳಿಲ್ಲದೆ ಇರಲೇ ಬೇಕು. ಮಲ್ಲಿಗೆಯ ಬಣ್ಣ ಬಿಳಿ, ಹಾಗು ಗುಲಾಬಿಯ ಬಣ್ಣ ಕೆಂಪು. ಹೀಗೆ, ಈ ಕಲಿಯುಗದಲ್ಲಿ ಒಂದೇ ಮನೆಯಲ್ಲಿ ನಾನಾ ಬಗೆಯ ಹೂವಿನ ಗಿಡಗಳು. ಆದುದರಿಂದ, ಮನೆಯೊಂದು ಹೂದೋಟದಂತಾಗಿದೆ. ಆದರೆ ಇದನ್ನು ಅರಿತುಕೊಳ್ಳದಿದ್ದಲ್ಲಿ ಏನಾಗುತ್ತದೆ? ದುಃಖವೇ ತಾನೇ! ಜಗತ್ತಿನಲ್ಲಿ ಈ ಬಗೆಯ ದೃಷ್ಟಿಕೋನವಿಲ್ಲ. ಇಲ್ಲಿ ಯಾರೂ ಕೆಟ್ಟವರಿಲ್ಲ. ಈ ಮತಭೇದಗಳೆಲ್ಲಾ ನಮ್ಮ ಅಹಂಕಾರದಿಂದಾಗಿದೆ. ಯಾರಿಗೆ ಈ ಜಗತ್ತನ್ನು ಸರಿಯಾಗಿ ನೋಡಲು ಬರುವುದಿಲ್ಲವೋ, ಅದು ಅವರ ಅಹಂಕಾರದಿಂದಾಗಿದೆ. ನಮ್ಮಲ್ಲಿ ಅಹಂಕಾರವು ಇಲ್ಲದಿರುವುದರಿಂದ, ಇಡೀ ಜಗತ್ತಿನೊಂದಿಗೆ ಬೇಧವೇ ಇರುವುದಿಲ್ಲ. ನನಗೆ ನೋಡಲು ಬರುತ್ತದೆ, 'ಇದು ಗುಲಾಬಿ, ಇದು ಮಲ್ಲಿಗೆ, ಇದು ದಾಸವಾಳ ಮತ್ತೆ ಇದು, ಹಾಗಲಕಾಯಿಯ-ಹೂವು' ಎಂದು; ಎಲ್ಲವನ್ನೂ ನಾನು ಕಂಡುಹಿಡಿಯುತ್ತೇನೆ. ತೋಟವೆಂದರೆ ಎಲ್ಲವೂ ಇರುತ್ತದೆ. ಎಲ್ಲದರ ಗುಣಗಳೂ ಮೆಚ್ಚುವಂತಿರುತ್ತದಲ್ಲವೇ? ನಿಮಗೇನು ಅನ್ನಿಸುತ್ತದೆ?

**ಪ್ರಶ್ನಕರ್ತ:** ಅದು ಸರಿ.

**ದಾದಾಶ್ರೀ:** ಪ್ರಕೃತಿಯಲ್ಲಿ ಬದಲಾವಣೆಯನ್ನು ಮಾಡಲಾಗುವುದಿಲ್ಲ. ಅದು ಹೇಗಿರುತ್ತದೆಯೋ ಹಾಗೆಯೇ ಇರುತ್ತದೆ. ಗುಣವನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ, ನಾವು (ಜ್ಞಾನಿಗಳು) ಪ್ರತಿಯೊಬ್ಬರೊಂದಿಗೂ ಅವರವರ ಪ್ರಕೃತಿಗನುಸಾರವಾಗಿ ಹೊಂದಿಕೊಳ್ಳುತ್ತೇವೆ. ಹೊರಗೆ ಸೂರ್ಯನೊಂದಿಗೆ ನಾವು ಮಧ್ಯಾಹ್ನದ ಹನ್ನೆರಡು ಗಂಟೆಯ ಹೊತ್ತಿಗೆ ಸ್ನೇಹಿತನಂತೆ ವರ್ತಿಸಲು ಹೋದರೆ ಏನಾಗಬಹುದು? ಎನ್ನುವುದನ್ನು ನಾವು ಮೊದಲೇ ತಿಳಿದಿರ ಬೇಕೇನೆಂದರೆ,, ಈ ಬೇಸಿಗೆಯ ಬಿಸಿಲಾದರೆ ಹೇಗಿರುತ್ತದೆ ಮತ್ತು ಚಳಿಗಾಲದ ಬಿಸಿಲಾದರೆ ಹೇಗಿರುತ್ತದೆ. ಆಗ ಏನಾದರೂ ತೊಂದರೆ ಉಂಟಾಗುತ್ತದೆಯೇ?

ನಾವು (ದಾದಾಶ್ರಿ) ಪ್ರಕೃತಿಯನ್ನು ಅರ್ಥಮಾಡಿಕೊಳ್ಳುತ್ತೇವೆ. ನೀವು ಹೊಡೆದೆಕೊಂಡು ಹೋಗುವವರಿದ್ದರೂ, ನಾವು ತಾಗಿಸಿಕೊಳ್ಳದ ಹಾಗೆ

ನೋಡಿಕೊಂಡು ಅಲ್ಲಿಂದ ಜಾರಿಕೊಳ್ಳುತ್ತೇವೆ. ಇಲ್ಲವಾದರೆ, ಇಬ್ಬರಿಗೂ 'ಆಕ್ಸಿಡೆಂಟ್' ಆಗುತ್ತದೆ ಮತ್ತು ಇಬ್ಬರ 'ಸ್ಪೇರ್-ಪಾರ್ಟ್ಸ್' ಮುರಿದುಬೀಳುತ್ತವೆ. ಮೊದಲಿಗೆ ಬಂಪರ್ ಮುರಿದುಹೋಗುವುದಲ್ಲದೆ, ಒಳಗೆ ಕುಳಿತಿರುವವನ ಸ್ಥಿತಿ ಏನಾಗಬೇಡ? ಕುಳಿತಿರುವವನ ಪಾಡು ಕುಳಿತಲ್ಲಿಯೇ ಜಖಂ! ಆದುದರಿಂದ, ಪ್ರಕೃತಿಯನ್ನು ನೀವು ಅರ್ಥಮಾಡಿಕೊಳ್ಳಬೇಕು. ಮನೆಯಲ್ಲಿನ ಪ್ರತಿಯೊಬ್ಬರ ಪ್ರಕೃತಿಯನ್ನು ಅರಿತುಕೊಂಡಿರಬೇಕು.

ಈ ಕಲಿಯುಗದ ಪ್ರಕೃತಿಗಳು, ಹೊಲ ಅಥವಾ ಗದ್ದೆಗಳಂತಲ್ಲ, ಇಲ್ಲಿ ಇದೊಂದು ಹೂದೋಟದಂತೆ. ಅದರೊಳಗೆ ಒಂದು ಸಂಪಿಗೆಯ ಗಿಡ, ಒಂದು ಗುಲಾಬಿಯ ಗಿಡ, ಒಂದು ಮಲ್ಲಿಗೆಯ ಗಿಡ, ಒಂದು ಸಾವಂತಿಗೆಯ ಗಿಡ, ಹೀಗೆ ಎಲ್ಲಾ ವಿಧವಾದ ಗಿಡಗಳಿಂದ ಕೂಡಿರುತ್ತವೆ. ಹೀಗಾಗಿ ಒಂದು ಪ್ರಕೃತಿ ಮತ್ತೊಂದು ಪ್ರಕೃತಿಯೊಂದಿಗೆ ಜಗಳವಾಡುತ್ತಲೇ ಇರುತ್ತದೆ. ಒಬ್ಬರ ಸ್ವಭಾವವು ಮತ್ತೊಬ್ಬರ ಸ್ವಭಾವದೊಂದಿಗೆ ಹೊಂದಾಣಿಕೆಯಾಗದೆ ಹೋದರೆ, ಜಗಳವಾಗುತ್ತಲೇ ಇರುತ್ತದೆ.

# 'ಕೌಂಟರ್-ಪುಲಿ'ಯ ಕೌಶಲ್ಯ

ನಾವು ನಮ್ಮ ಅಭಿಪ್ರಾಯವನ್ನು ಮೊದಲೇ ಹೇಳಲು ಹೋಗಬಾರದು. ಮೊದಲು ಎದುರಿನವರನ್ನು ಕೇಳಬೇಕು, 'ನಿಮಗೆ ಈ ವಿಷಯದ ಬಗ್ಗೆ ಏನನ್ನಿಸುತ್ತದೆ?', ಎದುರಿನವರು ಅವರ ವಿಚಾರವನ್ನೇ ಪಟ್ಟುಹಿಡಿದರೆ ನಾವು ನಮ್ಮದನ್ನು ಬಿಟ್ಟುಬಿಡಬೇಕು. ನಾವು ಇಲ್ಲಿ ಒಂದನ್ನು ಮಾತ್ರ ನೋಡಬೇಕು. ಏನೆಂದರೆ, ಅವರಿಗೆ ನಮ್ಮಿಂದ ಯಾವ ರೀತಿಯಿಂದಲೂ ದುಃಖವಾಗಬಾರದು. ನಮ್ಮ ಅನಿಸಿಕೆಯಿಂದ ಒತ್ತಾಯಪಡಿಸಬಾರದು. ಯಾವುದು ಒಪ್ಪಿಗೆಯೋ ಅದನ್ನು ನಾವು ಸ್ವೀಕರಿಸಿಬಿಡಬೇಕು. ನಾವಂತೂ (ದಾದಾಶ್ರಿ) ಎಲ್ಲರ ಅಭಿಪ್ರಾಯಗಳನ್ನು ಅಂಗೀಕರಿಸಿ 'ಜ್ಞಾನಿ'ಯಾಗಿ ಬಿಟ್ಟಿದ್ದೇವೆ. ನಾನು, ನನ್ನ ಅಭಿಪ್ರಾಯವನ್ನು ಒಪ್ಪುವಂತೆ ಮತ್ತೊಬ್ಬರಿಗೆ ಒತ್ತಾಯಪಡಿಸಲು ಹೋದರೆ, ಆಗ ನಾನೇ ಪಕ್ವವಾಗಿಲ್ಲವೆಂದಾಗುತ್ತದೆ. ನಮ್ಮ ಅಭಿಪ್ರಾಯಗಳಿಂದಾಗಿ ಎಲ್ಲಿಯೂ ಯಾರಿಗೂ ದುಃಖವಾಗದಂತೆ ನೋಡಿಕೊಳ್ಳಬೇಕು.

ನಿಮ್ಮ 'ರೆವೊಲ್ಯೂಷನ್'ನ ವೇಗವು 1800 ಇದ್ದರೆ, ಎದುರಿನವನ 'ರೆವೊಲ್ಯೂಷನ್'ನ ವೇಗವು 600 ಆಗಿರುವಾಗ, ನಾವು ನಮ್ಮ ಅಭಿಪ್ರಾಯವನ್ನು ಅವರ ಮೇಲೆ ಒತ್ತಡ ಹಾಕಿದರೆ, ಆಗ ಅವರ 'ಎಂಜಿನ್' ಮುರಿದುಬೀಳುವುದಲ್ಲದೆ ಅನಂತರ ಅವರ ಎಲ್ಲಾ ಬಿಡಿ-ಬಾಗಗಳನ್ನು ಬದಲಾಯಿಸ ಬೇಕಾಗುತ್ತದೆ.

**ಪ್ರಶ್ನಕರ್ತ:** 'ರೆವೊಲ್ಯೂಷನ್' ಅಂದರೆ ಏನು?

**ದಾದಾಶ್ರೀ:** ಯಾವ ವಿಚಾರಮಾಡುವ ಶಕ್ತಿಯಿದೆ. ಅದು ಪ್ರತಿಯೊಬ್ಬರಲ್ಲೂ ವಿಭಿನ್ನವಾಗಿರುತ್ತದೆ. ಎಲ್ಲಿ ಏನಾದರು ಮಾಡಬೇಕೆಂದಿದ್ದರೆ, ಆಗ ಒಂದು ನಿಮಿಷದಲ್ಲಿ ಎಷ್ಟೊಂದು ವಿಚಾರಗಳು ಬರುತ್ತವೆ, ಅದರ ಎಲ್ಲಾ ಪರ್ಯಾಯಗಳನ್ನು 'ಅಟ್ ಏ ಟೈಮ್ ' ತೋರಿಸುತ್ತದೆ. ಈ ದೊಡ್ಡ ದೊಡ್ಡ ವ್ಯಕ್ತಿಗಳಿಗೆ ನಿಮಿಷಕ್ಕೆ 'ರೆವೊಲ್ಯೂಷನ್' 1200 ವೇಗದಲ್ಲಿ ತಿರುಗುತ್ತಿದ್ದರೆ, ನಮ್ಮದು (ದಾದಾಶ್ರಿ) 5000 ವೇಗದಲ್ಲಿದ್ದರೆ, ಭಗವಾನ್ ಮಹಾವೀರರ 'ರೆವೊಲ್ಯೂಷನ್' ಒಂದು ಲಕ್ಷದ ವೇಗದಲ್ಲಿ ತಿರುಗುತ್ತಲಿತ್ತು!

ಭಿನ್ನಾಭಿಪ್ರಾಯಗಳು ಉಂಟಾಗಲು ಕಾರಣವೇನು? ನಿಮ್ಮ ಹೆಂಡತಿಯ 'ರೆವೊಲ್ಯೂಷನ್' 100 ಇದ್ದು, ನಿಮ್ಮ 'ರೆವೊಲ್ಯೂಷನ್' 500 ಇದ್ದರೆ, ಆಗ ಅಲ್ಲಿ ನಿಮಗೆ 'ಕೌಂಟರ್–ಪುಲಿ' ಅಳವಡಿಸಿಕೊಳ್ಳಲು ಗೊತ್ತಿಲ್ಲದಿರುವುದರಿಂದ ಅಲ್ಲಿ ಆ 'ಎಂಜಿನ್' ಬಿಸಿಯಾಗಿ, ಜಗಳವು ಪ್ರಾರಂಭವಾಗುತ್ತದೆ. ಹೀಗೆಯೇ ಎಷ್ಟೋ ಬಾರಿ 'ಎಂಜಿನ್'ನ್ನು ಮುರಿದುಬೀಳುತ್ತದೆ. ಈಗ, ನಿಮಗೆ 'ರೆವೊಲ್ಯೂಷನ್' ಅಂದರೆ ಏನೆಂದು ಅರ್ಥವಾಯಿತಲ್ಲವೇ? ನಿಮ್ಮ ಕೆಲಸದವರಿಗೆ ನೀವು ಹೇಳಿದ ಮಾತು ಅರ್ಥವಾಗುವುದಿಲ್ಲ. ಯಾಕೆಂದರೆ, ಅವರ 'ರೆವೊಲ್ಯೂಷನ್' 50 ಆಗಿದ್ದು, ನಿಮ್ಮ 'ರೆವೊಲ್ಯೂಷನ್' 500 ಆಗಿರುತ್ತದೆ. ಕೆಲವರಲ್ಲಿ ಅದರ ವೇಗವು 100 ಆಗಿದ್ದರೆ, ಇನ್ನು ಕೆಲವರ ವೇಗವು 1200 ಆಗಿರುತ್ತದೆ. ಅವರವರ 'ಡೆವಲಪ್ಮೆಂಟ್' ಪ್ರಮಾಣದ ಪ್ರಕಾರ 'ರೆವೊಲ್ಯೂಷನ್' ಹೊಂದಿರುತ್ತಾರೆ. ಇಬ್ಬರ ನಡುವೆ 'ಕೌಂಟರ್-ಪುಲಿ' ಹಾಕಿದರೆ ಮಾತ್ರ ನಿಮ್ಮ ಮಾತು ಮತ್ತೊಬ್ಬರಿಗೆ ಸರಿಹೊಂದುತ್ತದೆ. 'ಕೌಂಟರ್-ಪುಲಿ' ಎಂದರೆ, ಒಬ್ಬರ-ಮತ್ತೊಬ್ಬರ ವೇಗದ ನಡುವೆ ಹಿಡಿತಪಟ್ಟಿಯನ್ನು ಅಳವಡಿಸಿಕೊಂಡು, 'ರೆವೊಲ್ಯೂಷನ್'ನ ವೇಗವನ್ನು ಕಡಿತಗೊಳಿಸುವುದು. ನಾನು ಪ್ರತಿಯೊಬ್ಬರೊಂದಿಗೆ 'ಕೌಂಟರ್-ಪುಲಿ'ಯನ್ನು ಅಳವಡಿಸಿಕೊಂಡು ಬಿಡುತ್ತೇನೆ. ಕೇವಲ ಅಹಂಕಾರ ಮಾಡುವುದನ್ನು ಬಿಟ್ಟುಬಿಟ್ಟರೆ, ಆಗ ಎಲ್ಲವೂ ಸರಿ ಹೋಗುತ್ತದೆಂದು ಹೇಳಲಾಗುವುದಿಲ್ಲ. ಆದುದರಿಂದ, 'ಕೌಂಟರ್-ಪುಲಿ'ಯನ್ನು ಪ್ರತಿ ವ್ಯಕ್ತಿಯೊಂದಿಗೆ ಅಳವಡಿಸಿಕೊಳ್ಳುವುದು ಮುಖ್ಯವಾಗಿದೆ. ಇದರಿಂದಾಗಿ ಯಾರೊಂದಿಗೂ ನಮಗೆ ಭಿನ್ನಾಭಿಪ್ರಾಯವೇ ಉಂಟಾಗುವುದಿಲ್ಲವಲ್ಲ! ನಮಗೆ ತಿಳಿದಿರುತ್ತದೆ, ಆ ವ್ಯಕ್ತಿಯ 'ರೆವೊಲ್ಯೂಷನ್' ಇಷ್ಟೇ ಎಂದು. ಆಗ ಅಲ್ಲಿ ನಾವು ಅದಕ್ಕೆ ಅನುಗುಣವಾಗಿ 'ಕೌಂಟರ್-ಪುಲಿ'ಯನ್ನು ಅಳವಡಿಸಿಕೊಂಡುಬಿಡುತ್ತೇವೆ. ನಮಗೆ ಚಿಕ್ಕ ಮಕ್ಕಳೊಂದಿಗೆ ಕೂಡಾ ಬಹಳ ಹೊಂದಾಣಿಕೆಯು ಇರುತ್ತದೆ. ಅದಕ್ಕೆ ಕಾರಣವೇನೆಂದರೆ, ನಾವು ನಮ್ಮ 'ರೆವೊಲ್ಯೂಷನ್'ಅನ್ನು ಅವರಿಗೆ ಸರಿಹೊಂದುವಂತೆ 40ಕ್ಕೆ ಇಟ್ಟುಕೊಂಡುಬಿಡುತ್ತೇವೆ. ಹಾಗಾಗಿ. ನಮ್ಮಗಳು ಮಾತು ಒಪ್ಪಿಗೆಯಾಗುತ್ತದೆ. ಇಲ್ಲವಾದರೆ, ಆ 'ಮಷೀನ್' ಮುರಿದುಹೋಗುತ್ತದೆ.

**ಪ್ರಶ್ನಕರ್ತ:** ಯಾರೇ ಇರಲಿ ನಾವು ಅವರ ಮಟ್ಟಕ್ಕೆ ಹೊಂದಿಕೊಂಡು ಮಾತನಾಡಿದರೆ ಮಾತ್ರ ನಮ್ಮನ್ನು ಒಪ್ಪಿಕೊಳ್ಳುತ್ತಾರೆ ಅಲ್ಲವೇ?

**ದಾದಾಶ್ರೀ:** ಹೌದು. ಅವರ 'ರೆವೊಲ್ಯೂಷನ್' ಮಟ್ಟಕ್ಕೆ ಹೊಂದಿಕೊಂಡರೆ ಮಾತ್ರ ಅವರೊಂದಿಗೆ ಮಾತನಾಡಲು ಸಾಧ್ಯವಾಗುತ್ತದೆ. ಈಗ ನಿಮ್ಮೊಂದಿಗೆ ಮಾತನಾಡುತ್ತಿರುವಾಗಲೂ, ನಮ್ಮ 'ರೆವೊಲ್ಯೂಷನ್' ಎಲ್ಲಿಂದ ಎಲ್ಲಿಗೋ ಹೋಗಿಬರುತ್ತದೆ! ಇಡೀ ಪ್ರಪಂಚವನ್ನೇ ಸುತ್ತಿಕೊಂಡು ಬರುತ್ತದೆ!! ಆದರೆ ನಿಮ್ಮೊಳಗೆ ಈ 'ಕೌಂಟರ್-ಪುಲಿ'ಯನ್ನು ಅಳವಡಿಸಲು ಗೊತ್ತಿಲ್ಲದಿರುವಾಗ, ಅಲ್ಲಿ ಕಡಿಮೆ 'ರೆವೊಲ್ಯೂಷನ್'ನ ಎಂಜಿನ್'ನ ದೋಷವಾದರೂ ಏನಿದೆ? ಅಲ್ಲಿ ಸರಿಯಾಗಿ 'ಕೌಂಟರ್-ಪುಲಿ'ಯನ್ನು ಅಳವಡಿಸಲು ತಿಳಿಯದಿರುವುದು ನಿಮ್ಮ ತಪ್ಪಾಗಿದೆ.

# ಕಲಿತುಕೊಳ್ಳಿ 'ಫ್ಯೂಸ್' (ಕಾಪು ತಂತಿ) ಅಳವಡಿಸುವುದನ್ನು

ಪ್ರತಿಯೊಂದು ಯಂತ್ರವು ಹೇಗಿದೆಯೆಂದು ತಿಳಿದುಕೊಂಡಿರಬೇಕು. ಅದರ ಫ್ಯೂಸ್ ಹೊರಟು ಹೋದರೆ ಹೇಗೆ ಬೇರೊಂದು 'ಫ್ಯೂಸ್' ಅನ್ನು ಅಳವಡಿಸಬೇಕೆನ್ನುವುದನ್ನು ತಿಳಿದುಕೊಂಡಿದ್ದರೆ ಸಾಕು. ಎದುರಿನವರ ಪ್ರಕೃತಿಗೆ ಅನುಗುಣವಾಗಿ 'ಅಡ್ಜಸ್ಟ್' ಮಾಡಿಕೊಳ್ಳುವುದನ್ನು ಕಲಿತಿರಬೇಕು. ನಮ್ಮ ಮುಂದಿರುವ ವ್ಯಕ್ತಿಯ ಫ್ಯೂಸ್ ಹೊರಟು ಹೋದರೂ, ನಮಗೆ ಅಡ್ಜಸ್ಟ್‌ಮೆಂಟ್ ಇರುತ್ತದೆ. ಆದರೆ, ಮುಂದಿರುವ ವ್ಯಕ್ತಿಯ ಅಡ್ಜಸ್ಟ್‌ಮೆಂಟ್ ಮುರಿದುಬಿದ್ದರೆ ಏನಾಗುತ್ತದೆ? ಫ್ಯೂಸ್ ಹೋದಮೇಲೆ ಕತ್ತಲಿನಲ್ಲಿ ಗೋಡೆಗೆ ಹೊಡೆದುಕೊಳ್ಳುವುದು ಹಾಗೂ ಬಾಗಿಲಿಗೆ ತಾಕಿಸಿಕೊಳ್ಳುವುದಾಗುತ್ತದೆ. ಆದರೂ, ಅಲ್ಲಿ ತಂತಿಗಳ ಸಂಬಂಧ ತಪ್ಪಿಹೋಗಿಲ್ಲದೆ ಇರುವುದರಿಂದ, ಇಬ್ಬರಲ್ಲಿ ಒಬ್ಬರು ಫ್ಯೂಸ್ (ಅಡ್ಜಸ್ಟ್‌ಮೆಂಟ್) ಅಳವಡಿಸಿದರೆ ನಂತರ ಸಮಾಧಾನಕ್ಕೆ ಬರುತ್ತದೆ. ಇಲ್ಲದೆ ಹೋದರೆ, ಆಗ ಅಲ್ಲಿ ಸಂಪೂರ್ಣವಾಗಿ ಗೊಂದಲದಲ್ಲಿ ಸಿಲುಕಿಕೊಳ್ಳುವುದಾಗಿದೆ.

# ಆಯು ಮೊಟಕು ಮತ್ತು ಧಾಂದಲೆ ಲಂಬು

ನಮ್ಮಲ್ಲಿ ಹೆಚ್ಚಾಗಿ ದುಃಖವಾಗುವುದು ಯಾಕಾಗಿ? ಅದು ಈ 'ಡಿಸ್-ಅಡ್ಜಸ್ಟ್ಮೆಂಟ್'ನಿಂದಾಗಿದೆ. ನಿಮಗೆ 'ಅಡ್ಜಸ್ಟ್ ಎವ್ರಿವೇರ್' ಮಾಡಿಕೊಳ್ಳಲು ಏನು ತೊಂದರೆ?

**ಪ್ರಶ್ನಕರ್ತ:** ಅದಕ್ಕೆ ಪುರುಷಾರ್ಥದ ಅಗತ್ಯವಿದೆ.

**ದಾದಾಶ್ರೀ:** ಯಾವ ಪುರುಷಾರ್ಥವೂ ಬೇಕಿಲ್ಲ. ದಾದಾರವರು ಹೇಳಿದ್ದಾರೆ 'ಅಡ್ಜಸ್ಟ್ ಎವ್ರಿವೇರ್' ಎಂದು, ಹಾಗಾಗಿ ಅದನ್ನು ಪಾಲಿಸುತ್ತೇನೆಂದ ಕ್ಷಣದಿಂದಲೇ 'ಅಡ್ಜಸ್ಟ್' ಮಾಡಲು ಬಂದುಬಿಡುತ್ತದೆ. ಮನೆಯಲ್ಲಿ ಹೆಂಡತಿ ನಿಮ್ಮನ್ನು 'ಏನೂ ತಿಳಿಯದವರು' ಎಂದು ಹೇಳಿದಾಗ, ನೀವು 'ಯು ಆರ್ ಕರೆಕ್ಟ್' ಎಂದು ಹೇಳಿಬಿಡಿ. ಅವಳು ಹೊಸ ಸೀರೆಯನ್ನು ತರಲು 200 ರೂಪಾಯಿ ಕೇಳಿದರೆ, ನೀವು ಅವಳು ಕೇಳಿದಕ್ಕಿಂತ 50 ರೂಪಾಯಿ ಹೆಚ್ಚಾಗಿಯೇ ಕೊಟ್ಟುಬಿಡಬೇಕು. ಮುಂದಿನ ಆರು ತಿಂಗಳು ನೆಮ್ಮದಿಯಿಂದ ನಡೆಯುತ್ತದೆ!

ಬ್ರಹ್ಮನ ಒಂದು ದಿನ, ನಮ್ಮ ಇಡೀ ಜೀವನ! ಹಾಗಿರುವಾಗ, ಬ್ರಹ್ಮನ ಒಂದು ದಿನವನ್ನು ಜೀವಿಸಲು ಯಾಕೆ ಇಷ್ಟೊಂದು ಧಾಂದಲೆ? ನಾವೇನಾದರೂ ಬ್ರಹ್ಮನಂತೆ ನೂರು ವರ್ಷ ಬದುಕಬೇಕಾಗಿದ್ದರೆ ಹೌದು, 'ಅಡ್ಜಸ್ಟ್' ಯಾಕಾಗಿ ಮಾಡಿಕೊಳ್ಳಬೇಕು?' 'ಮೊಖದ್ದಮೆ' ನಡೆಸಲು ಹೇಳಬಹುದಾಗಿತ್ತು. ಆದರೆ, ಬೇಗನೆ ಮುಗಿಸಬೇಕಾಗಿರುವುದರಿಂದ, ಈಗ ಏನು ಮಾಡಬೇಕು? 'ಅಡ್ಜಸ್ಟ್' ಆಗಿಬಿಡುವುದೋ ಅಥವಾ ಮೊಖದ್ದಮೆ ನಡೆಸಲು ಹೇಳುವುದೋ? ಇರುವುದು ಒಂದೇ ದಿನ, ಅದು ಬೇಗನೆ ಮುಗಿಸಬೇಕಾಗಿದೆ. ಯಾವುದೇ ಕೆಲಸವನ್ನು ಬೇಗ ಮುಗಿಸಬೇಕಿದ್ದರೆ ಏನು ಮಾಡಬೇಕು? 'ಅಡ್ಜಸ್ಟ್' ಮಾಡಿಕೊಂಡು, ಮೊಟಕು ಮಾಡಿಬಿಡಬೇಕು. ಇಲ್ಲವಾದರೆ ಅದು ಲಂಬವಾಗುತ್ತದೆ ಅಲ್ಲವೇ? ಹೆಂಡತಿಯೊಂದಿಗೆ ಜಗಳವಾಡಿದರೆ ರಾತ್ರಿ ನಿಜವಾಗಿ ನಿದ್ರೆ ಬರುವುದೇ? ಹಾಗೂ ಬೆಳಿಗ್ಗೆ ಒಳ್ಳೆಯ ತಿಂಡಿಯೂ ಸಿಗುವುದಿಲ್ಲ.

# ಅಳವಡಿಸಿ ಜ್ಞಾನಿಗಳ ಜ್ಞಾನದ ಕಲೆಯನ್ನು

ಯಾವತ್ತೋ ಒಂದು ದಿನ ರಾತ್ರಿ ಹೆಂಡತಿ ಕೇಳುತ್ತಾಳೆ, 'ನನಗೆ ಅಂದು ನೋಡಿದ ಸೀರೆಯನ್ನು ಕೊಡಿಸುವುದಿಲ್ಲವೆ? ನನಗೆ ಆ ಸೀರೆಯನ್ನು ತೆಗೆದುಕೊಳ್ಳಲೇಬೇಕು'. ಅವನು ಕೇಳುತ್ತಾನೆ 'ಅದರ ಬೆಲೆ ಎಷ್ಟು?' ಎಂದು. ಅದಕ್ಕೆ ಅವಳು ಹೇಳುತ್ತಾಳೆ, 'ಹೆಚ್ಚೇನಿಲ್ಲ, 2,200 ರೂಪಾಯಿಗಳಾಗುತ್ತದೆ'. ಆಗ ಅವನು, 'ನಿನಗೆ ಅದು ಕಡಿಮೆ ಅನ್ನಿಸಬಹುದು, ಆದರೆ ನಾನು ಅಷ್ಟು ದುಡ್ಡು ಎಲ್ಲಿಂದ ತರಲಿ?' ಎಂದು ಹೇಳುತ್ತಾನೆ. ಆಗಲೇ ಅಲ್ಲಿ ಕೊಂಡಿಯು ಸಡಿಲವಾಗುತ್ತದೆ. 'ಇನ್ನೂರೋ, ಮುನ್ನೂರು ಆಗಿದ್ದರೆ ತಂದುಕೊಡುತ್ತಿದೆ. ಆದರೆ ನೀನು 2200 ರೂಪಾಯಿಗಳು ಎಂದು ಹೇಳುತ್ತಿರುವೆ!' ಎಂದಾಗ, ಇದನ್ನು ಕೇಳಿ ಅವಳು ಸಿಟ್ಟುಮಾಡಿಕೊಂಡು ಕುಳಿತುಬಿಡುತ್ತಾಳೆ. ಈಗ ಅವನ ಸ್ಥಿತಿ ಏನಾಗಬೇಕು? ಮನಸ್ಸಿನಲ್ಲೇ ಅನ್ನಿಸುತ್ತದೆ ಮದುವೆಯಾಗಿ ಕೈಸುಟ್ಟುಕೊಂಡೆ, ಇದಕ್ಕಿಂತ ಮದುವೆಯಾಗದೆ ಇದಿದ್ದರೆ ಒಳಿತಾಗಿತ್ತು! ಆದರೆ, ಮದುವೆಯಾದ ಮೇಲೆ ಪಶ್ಚಾತ್ತಾಪಿಸಿ ಪ್ರಯೋಜನವಾದರೂ ಏನು? ಆದ್ದರಿಂದಲೇ ಇಂತಹ ದುಃಖಗಳು.

**ಪ್ರಶ್ನಕರ್ತ:** ನೀವು ಹೇಳುವುದೇನೆಂದರೆ, ಹೆಂಡತಿಗೆ 2200 ರೂಪಾಯಿಯ ಸೀರೆಯನ್ನು ತಂದುಕೊಡಬೇಕೆಂದು?

**ದಾದಾಶ್ರೀ:** ತಂದುಕೊಡುವುದು ಬಿಡುವುದು ಅದು ನಿಮಗೆ ಬಿಟ್ಟಿದ್ದು. ಅವಳು ಸಿಟ್ಟುಮಾಡಿಕೊಂಡು ಪ್ರತಿದಿನ ರಾತ್ರಿ 'ಅಡಿಗೆ ಮಾಡುವುದಿಲ್ಲವೆಂದು' ಹೇಳುತ್ತಾಳೆ. ಆಗ ನಾವೇನು ಮಾಡಬೇಕು? ಎಲ್ಲಿಂದ ಊಟ ತರುವುದು? ಹಾಗಾಗಿ, ಸಾಲ ಮಾಡಿಯಾದರೂ ಸೀರೆಯನ್ನು ತಂದುಕೊಡಬೇಕಾಗುತ್ತದೆ ಅಲ್ಲವೇ?

ನೀವು ಹೀಗೊಂದು ಉಪಾಯ ಮಾಡಿದರೆ, ಆಗ ಅವಳು ಆ ಸೀರೆಯನ್ನು ತಂದುಕೊಡಿಯೆಂದು ಕೇಳುವುದೇ ಇಲ್ಲ. ನಿಮ್ಮ ತಿಂಗಳ ಸಂಬಳ ಎಂಟು ಸಾವಿರವಾಗಿದ್ದರೆ, ಅದರಿಂದ ಒಂದು ಸಾವಿರವನ್ನು ನಿಮ್ಮ ಖರ್ಚಿಗೆ ತೆಗೆದಿಟ್ಟುಕೊಂಡು, ಉಳಿದ ಏಳು ಸಾವಿರವನ್ನು ಅವಳಿಗೆ ಕೊಟ್ಟುಬಿಟ್ಟರೆ ಮತ್ತೆ ಅವಳು ನಿಮ್ಮನ್ನು ಸೀರೆ ತಂದುಕೊಡಲು ಕೇಳುತ್ತಾಳೆಯೇ? ಆಮೇಲೆ ಯಾವತ್ತೋ ಒಂದು ದಿನ, ನೀವೇ ತಮಾಷೆಗೆ ಕೇಳಿ, 'ನೀನು ಆದಿನ ಹೇಳುತ್ತಿದ್ದ ಸೀರೆ ಒಳ್ಳೆಯದಿತ್ತು. ಯಾಕೆ ಇನ್ನೂ ತರಲು ಹೋಗಲಿಲ್ಲ?' ಎಂದು. ಈಗ ಅವಳ ವಹಿವಾಟು ಅವಳೇ ನಡೆಸಬೇಕು! ನೀವು ನಡೆಸುತ್ತಿದ್ದರೆ, ಆಗ ನಿಮ್ಮ ಮೇಲೆ ಜೋರು ಮಾಡುತ್ತಿದ್ದಳು. ಈ ಎಲ್ಲಾ ಕಲೆಗಳನ್ನು ನಾನು ಜ್ಞಾನದ ಮೊದಲೇ ಕಲಿತ್ತಿದ್ದೆ, ಅದರ ನಂತರವಷ್ಟೇ ಜ್ಞಾನಿಯಾಗಿರುವುದು. ಎಲ್ಲಾ ಬಗೆಯ ಕಲಾಕೌಶಲ್ಯಗಳು ನನಗೆ ಬಂದ ಮೇಲೆ ನಾನು ಜ್ಞಾನಿ ಆಗಿದ್ದು!

ನೀವೇ ಹೇಳಿ ಈ ಕಲಾಕೌಶಲ್ಯಗಳು ಬಾರದ ಕಾರಣದಿಂದಲ್ಲವೇ ಈ ಎಲ್ಲಾ ದುಃಖಗಳು! ನಿಮಗೆ ಹೇಗೆ ಅನ್ನಿಸುತ್ತದೆ?

**ಪ್ರಶ್ನಕರ್ತ:** ಹೌದು, ನೀವು ಹೇಳುವುದು ಸರಿ.

**ದಾದಾಶ್ರೀ:** ಇದು, ನಿಮಗೆ ಅರ್ಥವಾಯಿತ್ತಲ್ಲವೆ? ತಪ್ಪೆಲ್ಲಾ ನಮ್ಮದೆ! ಕಲೆ ಗೊತ್ತಿಲ್ಲ ಅದರಿಂದಾಗಿ ಅಲ್ಲವೆ? ಕಲೆಯನ್ನು ಕಲಿಯುವುದು ಬಹಳ ಮುಖ್ಯ.

## ಕ್ಲೇಶಕ್ಕೆ ಮೂಲ ಕಾರಣ, ಅಜ್ಞಾನ

**ಪ್ರಶ್ನಕರ್ತ:** ಕಲಹಗಳು ಉಂಟಾಗಲು ಕಾರಣವೇನು? ಅದು ಸ್ವಭಾವಗಳು ಮೇಳೈಸದಿರುವುದರಿಂದ ಅಲ್ಲವೆ?

**ದಾದಾಶ್ರೀ:** ಅಜ್ಞಾನದಿಂದಾಗಿದೆ. ಸಂಸಾರವೆಂದು ಕರೆಯುವುದೇ ಅದಕ್ಕಾಗಿ, ಇಲ್ಲಿ ಒಬ್ಬರ ಸ್ವಭಾವ ಇನ್ನೊಬ್ಬರೊಂದಿಗೆ ಮೇಳೈಸುವುದಿಲ್ಲ. ಆದರೆ, ಈ ಆತ್ಮಜ್ಞಾನವನ್ನು ಪಡೆದ ಬಳಿಕ ಒಂದೇ ಒಂದು ದಾರಿ ಇದೆ. ಅದು, 'ಅಡ್ಜಸ್ಟ್ ಎವ್ರಿವೇರ್'. ಯಾರೇ ನಿಮಗೆ ಹೊಡೆದರೂ ನೀವು ಅವರೊಂದಿಗೆ 'ಅಡ್ಜಸ್ಟ್' ಮಾಡಿಕೊಂಡು ಹೋಗಬೇಕು.

ನಾವು ಈ ಸರಳವಾದ ಮತ್ತು ಸೀದಾ ರಸ್ತೆ ತೋರಿಸಿಕೊಡುತ್ತಿದ್ದೇವೆ, ಮತ್ತು ಈ ಹೊಡೆದಾಟವೇನು ಪ್ರತಿದಿನ ನಡೆಯುತ್ತದೆಯೇ? ಅದು ಯಾವಾಗ ನಿಮ್ಮ ಕರ್ಮದ ಉದಯವಾಗುವುದೋ, ಆಗ ಆ ಹೊತ್ತಿಗಷ್ಟೇ ನೀವು 'ಅಡ್ಜಸ್ಟ್' ಮಾಡಕೊಳ್ಳ ಬೇಕಾಗಿರುವುದು. ಮನೆಯಲ್ಲಿ ಹೆಂಡತಿಯೊಂದಿಗೆ ಜಗಳವಾಗಿದ್ದರೂ, ಜಗಳವು ತಣ್ಣಗಾದ ಮೇಲೆ ಅವಳನ್ನು 'ಹೋಟೆಲ್'ಗೆ ಕರೆದುಕೊಂಡುಹೋಗಿ ಚೆನ್ನಾಗಿ ತಿಂಡಿ ತಿನ್ನಿಸಿ ಖುಷಿಪಡಿಸಿಬಿಡಬೇಕು. ಜಗಳದಿಂದಾಗಿ ಉಂಟಾಗುವ ವೈಮನಸ್ಯದ ತಂತು ಉಳಿಯದಂತೆ ನೋಡಿಕೊಳ್ಳಬೇಕು.

## ದಾದಾ, ಎಲ್ಲೆಡೆಯೂ 'ಅಡ್ಜಸ್ಟ್'

ಒಂದು ದಿನ ಮನೆಯಲ್ಲಿ ಮಾಡಿದ ಸಾರು ಚೆನ್ನಾಗಿದ್ದರೂ ಸ್ವಲ್ಪ ಉಪ್ಪು ಜಾಸ್ತಿ ಬಿದ್ದುಬಿಟ್ಟಿತ್ತು. ಅದು ನಂತರ ಊಟ ಮಾಡುವಾಗ, ಉಪ್ಪು ಹೆಚ್ಚಾಗಿದೆ ಎಂದು ನನ್ನ ಅನುಭವಕ್ಕೆ ಬಂತು. ಆದರೂ, ಸ್ವಲ್ಪ ಊಟ ಮಾಡಲೇಬೇಕಲ್ಲವೇ? ಆದುದರಿಂದ ಹೀರಾಬಾ ಒಳಗೆ ಹೋದಾಗ ಸ್ವಲ್ಪ ನೀರು ಬೆರೆಸಿಕೊಂಡುಬಿಟ್ಟೆ. ಆಗ ಅವಳು ಅದನ್ನು ನೋಡಿ ಕೇಳಿದಳು, 'ಏನು ಮಾಡುತ್ತಿದ್ದೀರಾ?' ಎಂದು. ಆಗ ನಾನು ಹೇಳಿದೆ, 'ನೀನು ಒಲೆಯ ಮೇಲೆ ಇಟ್ಟು ನೀರು ಬೆರೆಸುತ್ತಿದ್ದೆ ಅದನ್ನೇ ನಾನು ಇಲ್ಲಿಯೇ ಕೆಳಗೆ

ಬೆರೆಸಿಕೊಂಡಿದ್ದೇನೆ'. ಆಗ ಅವಳು ಹೇಳಿದಳು, 'ನಾನು ಒಲೆಯ ಮೇಲೆ ನೀರು ಹಾಕಿ ಕುದಿಸಿಕೊಡುತ್ತಿದ್ದೆ' ಎಂದು. ನಾನು ಹೇಳಿದೆ, 'ನನ್ನ ಮಟ್ಟಿಗೆ ಎಲ್ಲವೂ ಕುದುಸಿದಂತೆಯೇ, ನನ್ನದು ಕೆಲಸದೊಂದಿಗಿನ ಕೆಲಸವಾಗಿದೆ ಅಷ್ಟೇ!'

ನೀವು ನನಗೆ 'ಬೆಳಿಗ್ಗೆ ಹನ್ನೊಂದು ಗಂಟೆಗೆ ಊಟ ಮಾಡಿಬಿಡಿಬೇಕು' ಎಂದು ಹೇಳಿದರೆ, ಆಗ ನಾನು 'ಸ್ವಲ್ಪ ತಡವಾಗಿ ಊಟ ಮಾಡಿದರೆ ನಡೆಯುವುದಿಲ್ಲವೇ?' ಎಂದರೆ. ಅದಕ್ಕೆ ನೀವು 'ಇಲ್ಲ, ಊಟ ಮಾಡಿದರೆ ಅಲ್ಲಿಯ ಕೆಲಸ ಮುಗಿಸಿಬಿಡಬಹುದು' ಎಂದು ಹೇಳುವಿರಿ, ಆಗ ನಾನು ತಕ್ಷಣವೇ ಊಟಕ್ಕೆ ಕುಳಿತುಕೊಂಡುಬಿಡುತ್ತೇನೆ ಮತ್ತು ನಾನು ನಿಮಗೆ 'ಅಡ್ಜಸ್ಟ್' ಆಗಿಬಿಡುತ್ತೇನೆ.

ಏನು ತಟ್ಟೆಗೆ ಬಡಿಸಿದೆಯೋ ಅದನ್ನು ಸೇವನೆ ಮಾಡಬೇಕು. ನಮ್ಮ ಮುಂದೆ ಏನು ಬರುತ್ತದೆಯೋ ಅದು ನಮ್ಮ ಸಂಯೋಗವಾಗಿದೆ. ಭಗವಾನ್ ಮಹಾವೀರರು ಹೇಳುತ್ತಾರೆ, 'ಸಂಯೋಗವನ್ನು ತಿರಸ್ಕರಿಸಿದರೆ ಅದರ ಪ್ರತಿಫಲವು ಹಿಂದಿರುಗಿ ನಿನಗೇ ಬರುತ್ತದೆ!'. ಆದುದರಿಂದ, ನಮಗೆ ಇಷ್ಟವಿಲ್ಲದ ಪದಾರ್ಥಗಳನ್ನು ಬಡಿಸಿದರೂ ಕೂಡಾ ಅದರಿಂದ ಒಂದೆರಡು ತುತ್ತು ತೆಗೆದು ತಿಂದುಬಿಡಬೇಕು. ತಿನ್ನದೇ ಹೋದರೆ, ಇಬ್ಬರೊಂದಿಗೆ ಅಸಮಾಧಾನ ಮಾಡಿದಂತಾಗುತ್ತದೆ. ಮೊದಲಿಗೆ, ಆ ಪದಾರ್ಥವನ್ನು ತಯ್ಯಾರಿಸಿಕೊಂಡು ತಂದವರಿಗೆ ತಿರಸ್ಕರಿಸುವುದರಿಂದ ಬೇಸರವಾಗುತ್ತದೆ; ನಂತರ ತಿನ್ನುವ ಪದಾರ್ಥದೊಂದಿಗೆ ತಿರಸ್ಕಾರ ಮಾಡಿದಂತಾಗುತ್ತದೆ. ತಿನ್ನುವ ಪದಾರ್ಥ ಕೇಳುತ್ತದೆ 'ನಾನು ಏನು ತಪ್ಪು ಮಾಡಿದ್ದೇನೆ? ನಾನು ನಿನ್ನ ಬಳಿಗೆ ಬಂದಿದ್ದೇನೆ ಮತ್ತು ನೀನು ನನ್ನ ಅಪಮಾನವನ್ನು ಯಾಕಾಗಿ ಮಾಡುತಿದ್ದೀಯಾ? ನಿನಗೆ ಎಷ್ಟು ಬೇಕೋ ಅಷ್ಟನ್ನು ಸ್ವೀಕರಿಸು. ಆದರೆ, ನನಗೆ ಅಪಮಾನ ಮಾತ್ರ ಮಾಡಬೇಡ' ಎಂದು. ಹೀಗಿರುವಾಗ, ನಾವು ಅದಕ್ಕೂ ಮರ್ಯಾದೆ ಕೊಡಬೇಕಲ್ಲವೇ? ನಮಗೆ ಇಷ್ಟವಿಲ್ಲದನ್ನು ಕೊಟ್ಟರೂ ನಾವು ಅದಕ್ಕೆ ಮರ್ಯಾದೆ ನೀಡುತ್ತೇವೆ. ಕಾರಣವೇನೆಂದರೆ, ಯಾವುದೂ ಸುಮ್ಮನೆ ನಮ್ಮ ಬಳಿ ಬರುವುದಿಲ್ಲ, ಬಂದದಕ್ಕೆ ಮರ್ಯಾದೆ ಕೊಡಬೇಕಾಗುತ್ತದೆ. ನಿಮಗೆ ತಿನ್ನಲು ವಸ್ತುವನ್ನು ಕೊಟ್ಟಾಗ ಅದರ ಲೋಪದೋಷಗಳನ್ನು ಎಣಿಸುತ್ತಿದ್ದರೆ, ಆಗ ಅದರಿಂದ ಸಿಗುವ ಸುಖ ನಿಮಗೆ ಕಡಿಮೆಯಾಗುವುದೋ ಇಲ್ಲ ಹೆಚ್ಚಾಗುವುದೋ? ಯಾವುದರಿಂದ ಸುಖವು ಕಡಿಮೆಯಾಗುವುದೋ ಅಂತಹ ವ್ಯಾಪಾರವನ್ನಾದರೂ ಯಾಕೆ ಮಾಡಬೇಕು? ನನಗೆ ಇಷ್ಟವಿಲ್ಲದ ಪದಾರ್ಥಗಳನ್ನು ತಂದಿಟ್ಟರೂ ಸಹ ನಾನು ಅವುಗಳನ್ನು ಸೇವಿಸಿಬಿಡುತ್ತೇನೆ ಮತ್ತು 'ಇವತ್ತಿನ ಊಟವು ಬಹಳ ಒಳ್ಳೆಯದಾಗಿತ್ತು' ಎಂದು ಹೇಳಿಬಿಡುತ್ತೇನೆ. ಅರೇ, ಎಷ್ಟೋ ಸಲ ಚಹಾದಲ್ಲಿ ಸಕ್ಕರೆ ಇಲ್ಲದಿದ್ದರೂ ನಾವು ಹೇಳುತ್ತಿರಲಿಲ್ಲ. ಅದಕ್ಕೆ ಜನರು ಹೇಳುತ್ತಾರೆ, 'ಹಾಗೆ ಮಾಡಿದರೆ, ಮನೆಯಲ್ಲಿ

ಎಲ್ಲಾ ಕೆಡಿಸಿಬಿಡುತ್ತಾರೆ'. ಆಗ, ನಾನು ಅವರಿಗೆ ಹೇಳಿದೆ, 'ನೀವೇ ನಾಳೆ ನೋಡಿ!' ಎಂದು. ಮರುದಿನ ಹೀರಾಬಾ ಕೇಳಿದಳು, 'ನಿನ್ನೆಯ ಚಹಾಕ್ಕೆ ಸಕ್ಕರೆಯೇ ಇರಲಿಲ್ಲ ಆದರೂ ನೀವು ನನಗೆ ಯಾಕೆ ಹೇಳಲಿಲ್ಲ?' ಆಗ ನಾನು ಹೇಳಿದೆ, 'ನಾನು ಹೇಳಬೇಕಾದ ಅಗತ್ಯವಾದರೂ ಏನಿದೆ? ಅದು ನಿನಗೆ ಗೊತ್ತಾಗುತ್ತದೆ! ನೀನೇನಾದರೂ ಚಹಾ ಕುಡಿಯದೆ ಇದ್ದಿದ್ದರೆ ನಾನು ಹೇಳಬೇಕಾದ ಅವಶ್ಯಕತೆ ಇರುತ್ತಿತ್ತು. ಆದರೆ, ನೀನೂ ಕುಡಿಯುವೆ ಅಲ್ಲವೇ? ಮತ್ತೆ ನಾನು ಹೇಳಬೇಕಾದ ಅಗತ್ಯವಾದರೂ ಏನಿದೆ?'

**ಪ್ರಶ್ನಕರ್ತ:** ಎಷ್ಟೊಂದು ಜಾಗೃತಿ ಇಟ್ಟುಕೊಳ್ಳಬೇಕಾಗುತ್ತದೆ. ಕ್ಷಣ ಕ್ಷಣವೂ!

**ದಾದಾಶ್ರೀ:** ಕ್ಷಣ ಕ್ಷಣವೂ, ಇಪ್ಪತ್ತನಾಲ್ಕು ಗಂಟೆಯೂ ಜಾಗೃತಿಯಲ್ಲಿ ಇರಬೇಕಾಗಿದೆ. ಆಗ ಮಾತ್ರವೇ ಈ ಜ್ಞಾನವು ಉಂಟಾಗುವುದು. ಈ ಜ್ಞಾನವು ಇದ್ದಕ್ಕಿದ್ದಂತೆ ಬಂದದ್ದಲ್ಲ! ಅದಕ್ಕಾಗಿ, ಮೊದಲಿನಿಂದ ಎಲ್ಲಾದರಲ್ಲೂ ಇದೆ ರೀತಿಯಾಗಿ 'ಅಡ್ಜಸ್ಟ್' ಮಾಡಿಕೊಂಡು ಬಂದಿದ್ದೇನೆ. ಆದುದರಿಂದಲೇ, ಎಲ್ಲಿಯೂ ಘರ್ಷಣೆಗಳು ಉಂಟಾಗುವುದಿಲ್ಲ.

ಒಂದು ದಿನ ನಾವು ಸ್ನಾನಮಾಡಲು ಹೋದಾಗ, ಅಲ್ಲಿ ತಂಬಿಗೆಯನ್ನು ಇಡಲು ಮರೆತುಬಿಟ್ಟಿದ್ದರು. ಅಂತಹ ಸಮಯದಲ್ಲಿ 'ಅಡ್ಜಸ್ಟ್‌ಮೆಂಟ್' ಮಾಡಿಕೊಳ್ಳದೆಹೋದರೆ, ನಮ್ಮನ್ನು ಹೇಗೆ ಜ್ಞಾನಿಗಳೆಂದು ಕರೆಯುವುದು? 'ಅಡ್ಜಸ್ಟ್' ಮಾಡಿಕೊಳ್ಳಬೇಕು. ಹಾಗಾಗಿ, ನಾನು ಸ್ವಲ್ಪ ಕೈಯಿಂದ ನೀರನ್ನು ಮುಟ್ಟಿ ನೋಡಿದರೆ ನೀರು ಬಹಳ ಬಿಸಿ ಇತ್ತು. ನೀರಿನ ಕೊಳವೆಯನ್ನು ಬಿಟ್ಟರೆ ತಣ್ಣೀರೂ ಕೂಡಾ ಬರುತ್ತಿರಲಿಲ್ಲ. ಆಮೇಲೆ ನಾನು ಸ್ವಲ್ಪ ಸ್ವಲ್ಪವೇ ನೀರನ್ನು ಕೈಗಳಿಂದ ತಣ್ಣಗೆ ಮಾಡಿಕೊಂಡು ಮೈಗೆಲ್ಲಾ ಸಿಂಪಡಿಸಿಕೊಂಡು ಸ್ನಾನಮಾಡಿ ಮುಗಿಸಿದೆ. ಅಷ್ಟರಲ್ಲಿ ಹೊರಗಿದ್ದ ಎಲ್ಲಾ ಮಹಾತ್ಮರುಗಳು ಹೇಳಲು ಪ್ರಾರಂಭಿಸಿದರು, 'ಇವತ್ತು ದಾದಾ ಏನೋ ಬಹಳ ಹೊತ್ತು ಸ್ನಾನಮಾಡುತ್ತಿದ್ದಾರೆ' ಎಂದು. ಅಂತಹ ವೇಳೆಯಲ್ಲಿ ಮಾಡುವುದಾದರೂ ಏನು? ನೀರು ಸ್ವಲ್ಪ ತಣ್ಣಗಾಗುವವರೆಗೆ ಕಾದುಕೂತುಕೊಳ್ಳಬೇಕಲ್ಲವೇ? ನಾವು ಯಾರಿಗೂ ನನಗೆ 'ಅದು ತಂದುಕೊಡಿ, ಇದು ತಂದುಕೊಡಿ' ಎಂದು ಹೇಳುವುದಿಲ್ಲ. ನಾವು 'ಅಡ್ಜಸ್ಟ್' ಮಾಡಿಕೊಂಡುಬಿಡುತ್ತೇವೆ. 'ಅಡ್ಜಸ್ಟ್' ಮಾಡಿಕೊಳ್ಳುವುದೇ ಧರ್ಮ! ಈ ಜಗತ್ತಿನಲ್ಲಿ ಪ್ಲಸ್-ಮೈನಸ್ (ಹೆಚ್ಚು-ಕಡಿಮೆಯ) 'ಅಡ್ಜಸ್ಟ್‌ಮೆಂಟ್' ಮಾಡಬೇಕಾಗುತ್ತದೆ. ಮೈನಸ್ ಇದ್ದಲ್ಲಿ ಪ್ಲಸ್ ಮತ್ತು ಪ್ಲಸ್ ಇದ್ದಲ್ಲಿ ಮೈನಸ್ ಮಾಡಬೇಕು. ನಮ್ಮ ಈ ಜಾಣತನವನ್ನು ನೋಡಿ ಯಾರಾದರೂ ಹುಚ್ಚುತನವೆಂದರೆ, ಆಗಲೂ ನಾವು 'ಹೌದು, ಅದು ಸರಿ' ಎಂದು ಒಪ್ಪಿಕೊಂಡು, ಅಲ್ಲಿ ಕೂಡಾ ಅದನ್ನು ತಕ್ಷಣವೇ ಮೈನಸ್ ಮಾಡಿಕೊಂಡುಬಿಡುತ್ತೇವೆ.

ಹಾಗೆ 'ಅಡ್ಜಸ್ಟ್' ಮಾಡಿಕೊಳ್ಳಲು ಬಾರದೇ ಹೋದರೆ, ಅವರನ್ನು ಮನುಷ್ಯರೆಂದು ಹೇಗೆ ಕರೆಯುವುದು? ಸಂಯೋಗಕ್ಕೆ ವಶರಾಗಿ 'ಅಡ್ಜಸ್ಟ್' ಆಗಿಬಿಟ್ಟರೆ ಮನೆಯಲ್ಲಿ ಯಾವ ತೊಂದರೆಯೂ ಇರುವುದಿಲ್ಲ. ನಾವು ಕೂಡ ಹಿರಾಬಾನೊಂದಿಗೆ 'ಅಡ್ಜಸ್ಟ್' ಮಾಡಿಕೊಳ್ಳುತ್ತಲೇ ಜೀವನ ನಡೆಸಿದ್ದೇವೆ! ಇನ್ನೊಬ್ಬರಿಂದ ಲಾಭ (ಅನುಕೂಲ) ಪಡೆಯಬೇಕೆಂದಿದ್ದರೆ 'ಅಡ್ಜಸ್ಟ್' ಮಾಡಿಕೊಂಡು ಹೋಗಬೇಕು. ಇಲ್ಲದೆ ಹೋದರೆ, ಲಾಭವು ಯಾವ ವಸ್ತುವಿನಿಂದಲೂ ಸಿಗುವುದಿಲ್ಲ, ಜೊತೆಗೆ ಸುಮ್ಮನೆ ಹಗೆತನವನ್ನು ಕಟ್ಟಿಕೊಳ್ಳುವುದು ಬೇರೆ! ಕಾರಣವೇನೆಂದರೆ, ಪ್ರತಿಯೊಂದು ಜೀವಿಗೆ ಸ್ವತಂತ್ರವಿದೆ ಹಾಗು ತನಗಾಗಿ ಸುಖವನ್ನು ಹುಡುಕಿಕೊಂಡು ಬಂದಿರುತ್ತದೆ. ಇನ್ನೊಬ್ಬರಿಗೆ ಸುಖ ಕೊಡಬೇಕೆಂದೇನೂ ಯಾರು ಬಂದಿರುವುದಿಲ್ಲ. ಈಗ ಅದಕ್ಕೆ ಸುಖವು ಸಿಗದೆ ದುಃಖವನ್ನು ಅನುಭವಿಸಬೇಕಾಗಿ ಬಂದರೆ, ಆಗ ಹಗೆತನವನ್ನು ಕಟ್ಟಿಕೊಳ್ಳುತ್ತದೆ. ಅದು ಹೆಂಡತಿ ಆಗಿರಬಹುದು ಅಥವಾ ಮಕ್ಕಳೇ ಆಗಿರಬಹುದು.

**ಪ್ರಶ್ನಕರ್ತ:** ಯಾವ ಸುಖವನ್ನು ಹುಡುಕಿಕೊಂಡು ಹೋಗುವಾಗ, ದುಃಖವು ಎದುರಾಗುವುದರಿಂದ ವೈರತ್ವವನ್ನು ಕಟ್ಟಿಕೊಳ್ಳುವುದಲ್ಲವೇ?

**ದಾದಾಶ್ರೀ:** ಹೌದು, ಅದು ಅಣ್ಣನೇ ಆಗಿರಲಿ ಅಥವಾ ಅಪ್ಪನೇ ಆಗಿರಲಿ. ಒಳಗಿಂದೊಳಗೆ ಅವರ ಮೇಲೆ ವೈರತ್ವವನ್ನು ಬೆಳೆಸಿಕೊಂಡುಬಿಡುತ್ತಾರೆ. ಈ ಜಗತ್ತಿನಲ್ಲಿ ಎಲ್ಲರೂ ಹಗೆತನವನ್ನೇ ಕಟ್ಟಿಕೊಳ್ಳುತ್ತಿದ್ದಾರೆ! ಅದನ್ನು ಬಿಟ್ಟು ಸ್ವಧರ್ಮದಲ್ಲಿ ಇದ್ದುಬಿಟ್ಟರೆ ಯಾರೊಂದಿಗೂ ವೈರತ್ವ ಇರುವುದಿಲ್ಲ.

ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಕೆಲವೊಂದು ಸಿದ್ಧಾಂತಗಳು (ಪ್ರಿನ್ಸಿಪಲ್) ಇರಲೇಬೇಕಾಗುತ್ತದೆ. ಆದರೂ, ಸಂಯೋಗದ ಅನುಸಾರವಾಗಿ ವರ್ತನೆಯೂ ಇರಬೇಕು. ಸಂಯೋಗದೊಂದಿಗೆ 'ಅಡ್ಜಸ್ಟ್' ಮಾಡುವವನನ್ನು ಮನುಷ್ಯನೆಂದು ಕರೆಯಲಾಗುವುದು. ಈ 'ಅಡ್ಜಸ್ಟ್‌ಮೆಂಟ್' ಎನ್ನುವುದನ್ನು ಎಲ್ಲಾ ಸಂಯೋಗದಲ್ಲಿ ಮಾಡಿಕೊಳ್ಳಲು ಬಂದುಬಿಟ್ಟರೆ, ಆಗ ಅದು ಸೀದಾ ಮೋಕ್ಷಕ್ಕೆ ತಲುಪಿಸಿಬಿಡುವಂತಹ ಅಸಾಧಾರಣವಾದ ಸಲಕರಣೆಯಾಗಿದೆ.

ಈ ದಾದಾ ಬಹಳ ಸೂಕ್ಷ್ಮ, ಮಿತವ್ಯಯಿ ಹಾಗು ಇತಿಮಿತಿಯಲ್ಲಿ ಇರುವವರು; ಜೊತೆಗೆ ಬಹಳ ಉದಾರಿಯು ಹೌದು ಮತ್ತು 'ಕಂಪ್ಲೀಟ್ ಅಡ್ಜಸ್ಟ್-ಏಬಲ್'. ಬೇರೆಯವರ ಸಲುವಾಗಿ ಉದಾರಿ ಆದರೆ ತಮಗಾಗಿ ದುಂದುಗಾರಿಕೆಯಿಲ್ಲ ಮತ್ತು ಉಪದೇಶ ನೀಡುವ ವಿಚಾರದಲ್ಲಿ ಅತಿಸೂಕ್ಷ್ಮ; ಆದುದರಿಂದಲೇ, ಎದುರಿನವರಿಗೆ ನಮ್ಮ ಸೂಕ್ಷ್ಮ ವಹಿವಾಟು ಕಾಣಸಿಗುತ್ತದೆ. ನಮ್ಮ 'ಎಕಾನಮಿಯು' 'ಅಡ್ಜಸ್ಟ್-ಏಬಲ್' ಆಗಿರುವುದರ ಜೊತೆಗೆ 'ಟಾಪ್ ಮೋಸ್ಟ್' ಆಗಿರುತ್ತದೆ. ನಾವು ನೀರನ್ನು ಉಪಯೋಗಿಸುವಾಗಲೂ ಕೂಡ

ಬಹಳ ಇತಿಮಿತಿಯಿಂದ ಖರ್ಚು ಮಾಡುತ್ತೇವೆ. ನಮ್ಮ ಪ್ರಾಕೃತಿಕ ಗುಣಗಳು ಸಹಜ ಭಾವನೆಗಳನ್ನು ಹೊಂದಿರುತ್ತವೆ.

# ಇಲ್ಲವಾದರೆ ವ್ಯವಹಾರವೆಲ್ಲಾ ಗೋಜಲು-ಕೊನೆಗೆ..

ಯಾರೇ ಆಗಲಿ, ಮೊದಲಿಗೆ ವ್ಯವಹಾರವನ್ನು ಕಲಿತುಕೊಳ್ಳಬೇಕು. ವ್ಯವಹಾರದ ಅರಿವಿಲ್ಲದೆ ಹೋದರೆ, ಜನರು ವಿಧವಿಧವಾದ ಸಮಸ್ಯೆಗಳಿಂದ ಹೊಡೆತವನ್ನು ತಿನ್ನಬೇಕಾಗುತ್ತದೆ.

**ಪ್ರಶ್ನಕರ್ತ:** ಆಧ್ಯಾತ್ಮಿಕದ ವಿಷಯದಲ್ಲಿ ನಿಮ್ಮ ಬಗ್ಗೆ ಯಾರೇನೂ ಹೇಳುವಂತಿಲ್ಲ. ಅದರ ಜೊತೆಗೆ, ಈ ವ್ಯವಹಾರದ ವಿಚಾರದಲ್ಲಿಯು ನಿಮ್ಮ ವಿಚಾರವು 'ಟಾಪ್' (ಅತ್ಯುನ್ನತವಾದ) ಮಾತಾಗಿದೆ.

**ದಾದಾಶ್ರೀ:** ಅದು ಹೇಗೆಂದರೆ, ವ್ಯವಹಾರದಲ್ಲಿಯೂ ಸಹ ಅತ್ಯುನ್ನತವಾದ ಅರಿವು ಇಲ್ಲದೆ ಹೋದರೆ, ಆಗ ಕೂಡಾ ಯಾರೂ ಮೋಕ್ಷಕ್ಕೆ ಹೋಗಲಾಗುವುದಿಲ್ಲ. ಅದೆಷ್ಟು (ಲಕ್ಷಾಂತರ) ಬಾರಿ ಆತ್ಮಜ್ಞಾನವಾಗಿದ್ದರೂ ಸಹ ವ್ಯವಹಾರವು ಬಿಡುತ್ತದೆಯೇ? ಅದು ನಿಮ್ಮನ್ನು ಬಿಡದಿದ್ದರೆ ನೀವೇನು ಮಾಡಲಾಗುತ್ತದೆ? ನೀವು ಶುದ್ಧಾತ್ಮ ಹೌದು. ಆದರೆ, ವ್ಯವಹಾರದಿಂದ ಬಿಡುಗಡೆ ಆಗಬೇಕಲ್ಲವೇ? ನೀವು ವ್ಯವಹಾರವನ್ನು ಗೋಜಲು ಗೋಜಲು ಮಾಡಿಕೊಂಡಿರುವುದಾಗಿದೆ. ಈಗ ಅವುಗಳನ್ನು ನೀವು ಆದಷ್ಟು ಬೇಗನೆ ಪರಿಹರಿಸಿಕೊಳ್ಳಬೇಕು!

ಒಬ್ಬರಿಗೆ, 'ಅಂಗಡಿಗೆ ಹೋಗಿ ಐಸ್ ಕ್ರೀಮ್ ತೆಗೆದುಕೊಂಡು ಬನ್ನಿ' ಎಂದು ಕಳುಹಿಸಿದರೆ, ಅವರು ಅರ್ಧದಾರಿಯಿಂದಲೇ ವಾಪಸು ಬಂದರೆ. ಅವರನ್ನು 'ಯಾಕೆ ಹಿಂದಿರುಗಿ ಬಂದಿರಿ?' ಎಂದು ಕೇಳಿದರೆ, ಅವರು ಹೇಳುತ್ತಾರೆ, 'ರಸ್ತೆಯಲ್ಲಿ ಹೋಗುವಾಗ ಒಂದು ಕತ್ತೆ ಅಡ್ಡ ಬಂತು, ಅದು ಅಪಶಕುನ!' ಎಂದು. ಇಂತಹ ಮೂಢನಂಬಿಕೆಯ ಜ್ಞಾನವು ಅವರಲ್ಲಿದ್ದಾಗ, ನಾವು ಅದನ್ನು ಅವರ ತಲೆಯಿಂದ ತೆಗೆದುಹಾಕಬೇಕಲ್ಲವೇ? ಅಲ್ಲಿ ಅವರಿಗೆ ತಿಳುವಳಿಕೆ ಕೊಡಬೇಕು. ಏನೆಂದರೆ, 'ನೋಡಿ ಕತ್ತೆಯಲ್ಲಿಯೂ ಭಗವಂತನು ವಾಸವಾಗಿದ್ದಾನೆ. ಆದುದರಿಂದ, ಅಲ್ಲಿ ಅಪಶಕುನವೆನ್ನುವುದೇನೂ ಇಲ್ಲ. ನೀವು ಆ ಕತ್ತೆಯನ್ನು ತಿರಸ್ಕಾರ ಮಾಡಿದರೆ, ಅದರೊಳಗಿರುವ ಭಗವಂತನಿಗೆ ಆ ತಿರಸ್ಕಾರವು ತಲುಪುತ್ತದೆ. ಅದರಿಂದಾಗಿ, ನಿಮಗೆ ಭಯಂಕರವಾದ ದೋಷವು ಅಂಟಿಕೊಳ್ಳುತ್ತದೆ. ಆದುದರಿಂದ, ಮತ್ತೆಂದೂ ಹೀಗೆ ಭಾವಿಸಬೇಡಿ'

ಎಂದು ತಿಳಿಸಿಕೊಡಬೇಕು. ಈ ರೀತಿಯಾದ ಅಜ್ಞಾನದ ಆಧಾರದಿಂದಾಗಿಯೇ 'ಅಡ್ಜಸ್ಟ್‌ಮೆಂಟ್' ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ.

# ತಪ್ಪನ್ನು, ಸರಿಪಡಿಸುವವರೇ ಸಂಕಿತಿಗಳು (ಆತ್ಮಜ್ಞಾನದ ದೃಷ್ಟಿಯುಳ್ಳವರು)

ಸಂಕಿತಿಗಳ ಲಕ್ಷಣಗಳೇನು? ಮನೆಯಲ್ಲಿನ ಎಲ್ಲಾ ಸದಸ್ಯರು ತಪ್ಪುಮಾಡಿದರೂ ಸಹ, ಅವೆಲ್ಲವನ್ನೂ ಅವರು ಸರಿಪಡಿಸಿ ಬಿಡುವಂಥವರು. ಎಲ್ಲಾ ವಿಷಯಗಳಲ್ಲೂ ಯೋಗ್ಯವಾದುದ್ದನ್ನೇ ಆಲೋಚಿಸುವಂಥವರು. ಇದು ಸಂಕಿತಿಗಳ ಲಕ್ಷಣವಾಗಿರುತ್ತದೆ. ನಾವು ಈ ಸಂಸಾರವನ್ನು ಬಹಳ ಸೂಕ್ಷ್ಮವಾಗಿ ಪರಿಶೀಲನೆ ಮಾಡಿದ್ದೇವೆ. ಅಂತಿಮ ಪ್ರಕಾರದ ಶೋಧನೆ ಮಾಡಿದ ಬಳಿಕವೇ ನಾವು ಈ ಎಲ್ಲವನ್ನೂ ವಿವರಿಸಿ ಹೇಳುತ್ತಿರುವುದಾಗಿದೆ. ವ್ಯವಹಾರದಲ್ಲಿ ಹೇಗೆ ಇರಬೇಕು ಎನ್ನುವುದರ ಬಗ್ಗೆ ತಿಳಿಸಿಕೊಡುವುದಲ್ಲದೆ, ಮೋಕ್ಷಕ್ಕೆ ಹೇಗೆ ಹೋಗುವುದು ಎನ್ನುವುದರ ಬಗ್ಗೆಯೂ ತಿಳುವಳಿಕೆಯನ್ನು ನೀಡುತ್ತೇವೆ. ನಿಮ್ಮಗಳ ಅಡಚಣೆಗಳನ್ನು ಹೇಗೆ ಹೋಗಲಾಡಿಸುವುದು ಎನ್ನುವುದೊಂದೇ ನಮ್ಮ ಉದ್ದೇಶವಾಗಿದೆ.

ಯಾವಾಗಲು ನಾವು ಆಡುವ ಮಾತುಗಳು ಎದುರಿನವರಿಗೆ 'ಅಡ್ಜಸ್ಟ್' ಮಾಡಿಕೊಳ್ಳುವಂತಿರಬೇಕು. ನಮ್ಮ ಮಾತು ಎದುರಿನವರಿಗೆ 'ಅಡ್ಜಸ್ಟ್' ಮಾಡಿಕೊಳ್ಳಲು ಸಾಧ್ಯವಾಗದಿದ್ದರೆ, ಅದು ನಮ್ಮದೇ ತಪ್ಪು. ತಪ್ಪನ್ನು ಒಪ್ಪಿಕೊಂಡರೆ ಆಗ 'ಅಡ್ಜಸ್ಟ್' ಆಗಲು ಸಾಧ್ಯವಾಗುತ್ತದೆ. ವಿತರಾಗಿಗಳ ವಾಣಿಯು ಕೂಡ 'ಎವ್ರಿವೇರ್- ಅಡ್ಜಸ್ಟ್‌ಮೆಂಟ್' ವಾಣಿಯಾಗಿದೆ.

**ಪ್ರಶ್ನಕರ್ತ:** ದಾದಾ, ಯಾವ ಈ 'ಅಡ್ಜಸ್ಟ್ ಎವ್ರಿವೇರ್' ಎನುವುದೇನು, ನೀವು ಹೇಳಿಕೊಟ್ಟಿರುವಿರೋ, ಅದನ್ನು ಪಾಲಿಸುವುದರಿಂದ ಎಲ್ಲಾ ವಿಧದ ಕಠಿಣ ಸಮಸ್ಯೆಗಳು ನಿವಾರಣೆಯಾಗಿಬಿಡುತ್ತವೆ!

**ದಾದಾಶ್ರೀ:** ಎಲ್ಲಾ ನಿವಾರಣೆಯಾಗುತ್ತವೆ. ನಮ್ಮಯ ಒಂದೊಂದು ಶಬ್ದವು ಏನಿದೆ, ಅದು ಎಲ್ಲವನ್ನೂ ಬಹು ಬೇಗನೆ ಪರಿಹರಿಸಿಬಿಡುತ್ತದೆ, ಅಲ್ಲದೆ ನೇರವಾಗಿ ಮೋಕ್ಷಕ್ಕೆ ಕರೆದುಕೊಂಡು ಹೋಗುತ್ತದೆ. ಹಾಗಾಗಿ, 'ಅಡ್ಜಸ್ಟ್ ಎವ್ರಿವೇರ್'!

**ಪ್ರಶ್ನಕರ್ತ:** ಇಲ್ಲಿಯವರೆಗೆ ಇಷ್ಟವಾಗುತ್ತಿತ್ತೋ ಅಲ್ಲಿ ಮಾತ್ರವೇ 'ಅಡ್ಜಸ್ಟ್' ಆಗುವುದಾಗಿತ್ತು. ಆದರೆ, ಈಗ ನಿಮಗೆ ಅರಿವು ಬಂದಿದೆ, ಎಲ್ಲಿ ಇಷ್ಟವಾಗುವುದಿಲ್ಲವೋ, ಮೊದಲಿಗೆ 'ಅಡ್ಜಸ್ಟ್' ಮಾಡಿಕೊಳ್ಳಬೇಕು ಎಂದು.

**ದಾದಾಶ್ರೀ:** ಹೌದು, 'ಎವ್ರಿವೇರ್ ಅಡ್ಜಸ್ಟ್' ಆಗಬೇಕು.

# ದಾದಾರವರ ಅಪೂರ್ವ ವಿಜ್ಞಾನ

**ಪ್ರಶ್ನಕರ್ತ:** ಈ 'ಅಡ್ಜಸ್ಟ್‌ಮೆಂಟ್' ಬಗ್ಗೆ ಮಾತನಾಡುವಾಗ, ಅದರ ಹಿಂದೆ ಭಾವನೆಯು ಏನಿರಬೇಕು? ಹಾಗು ಎಲ್ಲಿಯವರೆಗೆ ನಾವು 'ಅಡ್ಜಸ್ಟ್‌ಮೆಂಟ್' ಮಾಡುತ್ತಲೇ ಇರಬೇಕು?

**ದಾದಾಶ್ರೀ:** ಭಾವನೆ ಮಾಡುವುದು ಶಾಂತಿಗಾಗಿ, ಉದ್ದೇಶ ಕೂಡ ಶಾಂತಿಗಾಗಿ. ಅಶಾಂತಿಯು ಉತ್ಪನ್ನವಾಗದಂತೆ ಮಾಡಲು ಇದೊಂದು ತಂತ್ರವಾಗಿದೆ. ಈ 'ದಾದಾ'ರವರ, ವಿಜ್ಞಾನವು 'ಅಡ್ಜಸ್ಟ್‌ಮೆಂಟ್'ನ ವಿಜ್ಞಾನವಾಗಿದೆ. ಇದು ಅಸಾಧಾರಣವಾದ 'ಅಡ್ಜಸ್ಟ್‌ಮೆಂಟ್' ಆಗಿದೆ! ಹಾಗು ಎಲ್ಲಿ 'ಅಡ್ಜಸ್ಟ್‌ಮೆಂಟ್' ಮಾಡಿಕೊಂಡಿಲ್ಲವೋ, ಅಲ್ಲಿಯ ಅದರ ರುಚಿಯ ಅನುಭವವು ನಿಮಗೆ ಮನವರಿಕೆಯಾಗಿರಬೇಕಲ್ಲವೇ? ಅಲ್ಲಿ ಅದೆಲ್ಲವೂ 'ಡಿಸ್-ಅಡ್ಜಸ್ಟ್‌ಮೆಂಟ್'ನ ಮೂರ್ಖತನದಿಂದಾಗಿದೆ. 'ಅಡ್ಜಸ್ಟ್‌ಮೆಂಟ್' ಮಾಡಿಕೊಳ್ಳುವುದನ್ನು ನಾವು ನ್ಯಾಯವೆಂದೇ ಹೇಳುವುದಾಗಿದೆ. ಈ ಆಗ್ರಹ-ದುರಾಗ್ರಹಗಳನ್ನು ಎಲ್ಲಿಯೂ ನ್ಯಾಯವೆಂದು ಕರೆಯುವುದಿಲ್ಲ. ಯಾವ ರೀತಿಯ ಆಗ್ರಹವಿದ್ದರೂ ಅದು ನ್ಯಾಯವಲ್ಲ. ನಾವು (ಜ್ಞಾನಿಗಳು) ಯಾವುದರ ಬಗ್ಗೆಯೂ ಸ್ವಲ್ಪವೂ ಕೂಡ ಪಟ್ಟುಹಿಡಿಯುವುದಿಲ್ಲ. ಯಾವ ನೀರಿನಲ್ಲಿ ಬೇಳೆ ಬೇಯುತ್ತದೆ, ಅದರಲ್ಲಿ ಬೇಯಿಸಿ ಬಿಡುವುದಾಗಿದೆ. ಕೊನೆಗೆ ಅದು ಕೊಳಚೆ ನೀರಾಗಿದ್ದರೂ ಸರಿ, ಬೇಯಿಸಿಕೊಂಡು ಬಿಡುವುದಾಗಿದೆ!

ಇಲ್ಲಿಯವರೆಗೆ ಒಬ್ಬ ವ್ಯಕ್ತಿಯು ಸಹ ನನ್ನೊಂದಿಗೆ ಡಿಸ್-ಅಡ್ಜಸ್ಟ್ ಆದದ್ದಿಲ್ಲ. ಆದರೆ, ಈ ಜನರು ಮನೆಯಲ್ಲಿ ಇರುವ ನಾಲ್ಕು ವ್ಯಕ್ತಿಗಳೊಂದಿಗೆ ಅಡ್ಜಸ್ಟ್ ಮಾಡಿಕೊಳ್ಳುವುದಿಲ್ಲ. ಅಲ್ಲಿ ಅಡ್ಜಸ್ಟ್ ಮಾಡಿಕೊಳ್ಳಲು ಸಾಧ್ಯವಿದೆಯೋ ಇಲ್ಲವೋ? ಹಾಗೆ ಮಾಡಲು ಆಗುವುದೋ ಇಲ್ಲವೋ? ನಾವು ಏನು ನೋಡುತ್ತೇವೋ, ಅದನ್ನೇ ನಾವು ಜೀವನದಲ್ಲಿ ಅಳವಡಿಸಿಕೊಳ್ಳುತ್ತೇವೆ ಅಲ್ಲವೇ? ಈ ಜಗತ್ತಿನ ನಿಯಮವೇನೆಂದರೆ, ಯಾವುದನ್ನು ನೋಡುವೆಯೋ, ಅದರ ಪೂರ್ಣ ತಿಳುವಳಿಕೆ ನಿನಗೆ ಬಂದು ಬಿಡುತ್ತದೆ. ಅಲ್ಲಿ ಏನನ್ನೂ ಹೇಳಿಕೊಡಬೇಕಾದ ಅಗತ್ಯವೇಯಿಲ್ಲ. ನಾನು ಎಷ್ಟೇ ಉಪದೇಶವನ್ನು ಮಾಡಿದರೂ, ಏನೂ ಉಪಯೋಗವಿಲ್ಲ; ಏನನ್ನೂ ಕಲಿಯಲಾಗುವುದಿಲ್ಲ. ಆದರೆ ನಮ್ಮ ವರ್ತನೆಯನ್ನು ನೋಡಿ, ನಿಮಗೆ ಸಹಜವಾಗಿಯೇ ಬಂದುಬಿಡುತ್ತದೆ.

ಮನೆಯಲ್ಲಿರುವ ವ್ಯಕ್ತಿಗಳೊಂದಿಗೆ ಅಡ್ಜಸ್ಟ್ ಮಾಡಿ ಕೊಂಡು ಹೋಗಲು ಬರುವುದಿಲ್ಲ ಹಾಗೂ ಆತ್ಮಜ್ಞಾನದ ಶಾಸ್ತ್ರಗಳನ್ನು ಪಠನೆಮಾಡಿಕೊಂಡು ಕುಳಿತಿರುತ್ತಾರೆ! 'ಮೂರ್ಖ, ಅವುಗಳನ್ನೆಲ್ಲಾ ಈಗ ಮೂಲೆಗಿಟ್ಟು, ಮೊದಲು

ಹೊಂದಿಕೊಂಡು ಹೋಗುವುದನ್ನು ಕಲಿ'. ಅದನ್ನು ಮೊದಲಿಗೆ ಕಲಿಯಬೇಕು. ಮನೆಯಲ್ಲಿ ಅಡ್ಜಸ್ಟ್ ಮಾಡಿಕೊಳ್ಳಲು ಸ್ವಲ್ಪ ಕೂಡಾ ಬರುವುದಿಲ್ಲ, ಹಾಗಿದೆ ಈ ಪ್ರಪಂಚ!

ಸಂಸಾರದಲ್ಲಿ ಬೇರೇನೂ ಬಾರದಿದ್ದರೂ ಪರವಾಗಿಲ್ಲ. ವ್ಯಾಪಾರದಲ್ಲಿ ತಿಳುವಳಿಕೆಯು ಕಡಿಮೆಯಿದ್ದರೂ ಪರವಾಗಿಲ್ಲ. ಆದರೆ, ಎಲ್ಲಾ ಕಡೆಯೂ ಅಡ್ಜಸ್ಟ್ ಮಾಡಿಕೊಂಡು ಹೋಗುವುದನ್ನು ಕಲಿತಿರಬೇಕು. ಅಂದರೆ, ಅಲ್ಲಿ ವಸ್ತುಸ್ಥಿತಿಗೆ ಅನುಸರಿಸಿ 'ಅಡ್ಜಸ್ಟ್' ಆಗುವುದನ್ನು ಕಲಿತುಕೊಳ್ಳಲೇ ಬೇಕು. ಈ ಕಾಲದಲ್ಲಿ ಅಡ್ಜಸ್ಟ್ ಮಾಡಿಕೊಳ್ಳಲು ಬಾರದಿದ್ದರೆ ಬದುಕಲು ಸಾಧ್ಯವಿಲ್ಲ. ಆದುದರಿಂದ, ಎಲ್ಲೆಡೆಯೂ 'ಅಡ್ಜಸ್ಟ್ ಎವ್ರಿವೇರ್' ಆಗಿಕೊಂಡು ಕೆಲಸವನ್ನು ಮುಗಿಸಿಕೊಳ್ಳುವುದನ್ನು ನೋಡಬೇಕು.

**-ಜೈ ಸಚ್ಚಿದಾನಂದ್**

*******************

# ಸಂಪರ್ಕಿಸಿ

ದಾದಾ ಭಗವಾನ್ ಪರಿವಾರ

**ಅಡಾಲಜ್:** ತ್ರಿಮಂದಿರ್ ಸಂಕುಲ್, ಸೀಮಂಧರ್ ಸಿಟಿ, ಅಹಮದಾಬಾದ್-ಕಲೋಲ್ ಹೈವೇ, ಪೋಸ್ಟ್: ಅಡಾಲಜ್, ಜಿ. – ಗಾಂಧೀನಗರ್, ಗುಜರಾತ್ – 382421. ಫೋನ್: (079) 39830100, ಇಮೇಲ್: info@dadabhagwan.org

**ಅಹಮದಾಬಾದ್:** ದಾದಾ ದರ್ಶನ್, 5, ಮಮತಾಪಾರ್ಕ್ ಸೊಸೈಟಿ, ನವಗುಜರಾತ್ ಕಾಲೇಜಿನ ಹಿಂಭಾಗದಲ್ಲಿ, ಉಸ್ಮಾನ್‌ಪುರಾ, ಅಹಮದಾಬಾದ್ – 380014, ಫೋನ್: (079) 27540408

| | | | |
|---|---|---|---|
| **ಮುಂಬೈ** | 9323528901 | **ಬೆಂಗಳೂರು** | 9590979099 |
| **ದೆಹಲಿ** | 9810098564 | **ಹೈದರಾಬಾದ್** | 9989877786 |
| **ಕೊಲ್ಕತ್ತಾ** | (033)-32933885 | **ಚೆನ್ನೈ** | 9380159957 |
| **ಜಯಪುರ** | 9351408285 | **ಪೂನಾ** | 9422660497 |
| **ಭೂಪಾಲ** | 9425024405 | **ಯುಎಇ** | +971 557316937 |
| **ಇಂದೋರ್** | 9893545351 | **ಯು.ಕೆ.** | +44330-111-(3232) |
| **ಜಬಲ್ಪುರ** | 9425160428 | **ಕೀನ್ಯಾ** | +254 722 722 063 |
| **ರಾಯಪುರ** | 9329523737 | **ಸಿಂಗಪೂರ್** | +65 81129229 |
| **ಬಿಲಾಯ್** | 9827481336 | **ಆಸ್ಟ್ರೇಲಿಯಾ** | +61 421127947 |
| **ಪಟ್ನಾ** | 9431015601 | **ನ್ಯೂಜಿಲ್ಯಾಂಡ್** | +64 21 0376434 |
| **ಅಮರಾವತಿ** | 9422915064 | **ಯು.ಎಸ್.ಎ.** | +1 877-505-DADA (3232) |
| **ಜಲಂಧರ್** | 9814063043 | | |

Website: www.dadabhagwan.org



## ಅಡ್ಜಸ್ಟ್ ಎವ್ರಿವೇರ್

ಸಂಸಾರದಲ್ಲಿ ಬೇರೇನೂ ಬಾರದಿದ್ದರೂ ತೊಂದರೆ ಇಲ್ಲ, ಆದರೆ 'ಅಡ್ಜಸ್ಟ್' ಮಾಡಿಕೊಳ್ಳಲು ಕಲಿತಿರಬೇಕು. ಎದುರಿನವರು 'ಡಿಸ್-ಅಡ್ಜಸ್ಟ್' ಅನ್ನು ಉಂಟು ಮಾಡುತ್ತಿದ್ದರೂ, ಅಲ್ಲಿ ನಾವು ಅನುಸರಣೆ ಮಾಡಿಕೊಳ್ಳುವುದನ್ನು ಕಲಿತಿರಬೇಕು. ಆಗ ಯಾವ ದುಃಖವೂ ಉಂಟಾಗುವುದಿಲ್ಲ. ಅದಕ್ಕಾಗಿಯೇ, ನಾವು 'ಅಡ್ಜಸ್ಟ್ ಎವ್ರಿವೇರ್'ಆಗಿ, ಪ್ರತಿಯೊಬ್ಬರೊಂದಿಗೆ 'ಅಡ್ಜಸ್ಟ್ಮೆಂಟ್' ಮಾಡಿಕೊಂಡರೆ ಅದುವೇ ಅತಿದೊಡ್ಡ ಧರ್ಮವಾಗಿದೆ. ಈ ಕಾಲದಲ್ಲಂತೂ ವಿಧವಿಧವಾದ ಪ್ರಕೃತಿಯವರು. ಹೀಗಿರುವಾಗ 'ಅಡ್ಜಸ್ಟ್' ಮಾಡಿಕೊಳ್ಳದೆ ಹೋದರೆ ಹೇಗೆ ನಡೆಯುತ್ತದೆ?

ನಾವು ಈ ಸಂಸಾರವನ್ನು ಬಹಳ ಸೂಕ್ಷ್ಮವಾಗಿ ಪರಿಶೀಲನೆಯನ್ನು ಮಾಡಿ, ಅಂತಿಮ ಪ್ರಕಾರದ ಶೋಧನೆಯನ್ನು ಮಾಡಿದ ಬಳಿಕವೇ, ನಾವು ಈ ಎಲ್ಲವನ್ನು ವಿವರಿಸಿ ಹೇಳುತ್ತಿರುವುದಾಗಿದೆ. ವ್ಯವಹಾರದಲ್ಲಿ ಹೇಗೆ ಇರಬೇಕು ಎಂಬುದರ ಬಗ್ಗೆ ತಿಳಿಸಿಕೊಡುವುದಲ್ಲದೆ, ಮೋಕ್ಷಕ್ಕೆ ಹೋಗುವುದು ಹೇಗೆ ಎಂಬುದರ ಬಗ್ಗೆಯೂ ತಿಳುವಳಿಕೆ ನೀಡುತ್ತೇವೆ. ನಿಮ್ಮ ಅಡಚಣೆಗಳೆಲ್ಲಾ ಕಡಿಮೆಯಾಗಲಿ ಎನ್ನುವುದೊಂದೇ ನಮ್ಮ ಉದ್ದೇಶವಾಗಿದೆ.

-ದಾದಾಶ್ರೀ

मूल दीपक से प्रकट दीपमाला

dadabhagwan.org

ISBN 978-93-87551-24-4

9 789387 551244

Printed in India

Price ₹15